ಸಂಪಾದಕರು: ರವಿಕುಮಾರ್ ಸಿ.ಹೆಚ್.
ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ
# ಸೂರ್ಯ ಪ್ರಗತಿ
SURYAPRAGATHI Kannada Daily
ಪ್ರತಿ ಸುದ್ಧಿಯ ಧ್ವನಿ
suryapragathi2021@gmail.com Mob: 9901010109 RNI:KARKAN/2021/80805 L2/RNP-1285/TMR/2025-27

Volume: 05 Issue: 52 Date: 06-03-2026 Friday RNI NO : KARKAN/2021/80805 L2/RNP-1285/TMR/2025-27 Page :4 Price: 1.00
ಸಂಪುಟ: 05 ಸಂಚಿಕೆ: 52 ಪುಟ : 4 ಬೆಲೆ: 1.00 ರೂ

## ವ್ಯಕ್ತಿ ಪೂಜೆ ಪ್ರಜಾಪ್ರಭುತ್ವಕ್ಕೆ ಅಪಾಯಕಾರಿ: ದತ್ತ ಕಳವಳ



ತುಮಕೂರು: ಏಕವ್ಯಕ್ತಿಯ ಪೂಜೆ ಮತ್ತು ವ್ಯಕ್ತಿತ್ವದ ಅತಿಯಾದ ವೈಭವೀಕರಣವು ಪ್ರಜಾಪ್ರಭುತ್ವದ ಆಶಯಗಳಿಗೆ ಮಾರಕವಾಗಿದೆ ಎಂದು ಮಾಜಿ ಶಾಸಕ ಹಾಗೂ ಸಂಸದೀಯ ಪಟು ವೈ.ಎಸ್.ವಿ. ದತ್ತ ಅವರು ಅಭಿಪ್ರಾಯಪಟ್ಟರು.

ಭಾರತ ಸರ್ಕಾರದ ಯುವಜನ ವ್ಯವಹಾರ ಮತ್ತು ಕ್ರೀಡಾ ಇಲಾಖೆ ಹಾಗೂ ರಾಷ್ಟ್ರೀಯ ಸೇವಾ ಯೋಜನೆ (ಓಖಖ) ವತಿಯಿಂದ ತುಮಕೂರು ವಿಶ್ವವಿದ್ಯಾನಿಲಯದ ವಿಶ್ವೇಶ್ವರಯ್ಯ ಸಭಾಂಗಣದಲ್ಲಿ ಮಾ. 5 ಗುರುವಾರದಂದು ಆಯೋಜಿಸಲಾಗಿದ್ದ "ವಿಕಸಿತ್ ಭಾರತ್ ಯೂತ್ ಪಾರ್ಲಿಮೆಂಟ್-2026" ಜಿಲ್ಲಾ ಮಟ್ಟದ ಯುವ ಸಂಸತ್ ಉತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿಕಸಿತ ಭಾರತದ ನಿರ್ಮಾಣದಲ್ಲಿ ಯುವಜನತೆಯ ಪಾತ್ರ ಅತ್ಯಂತ ಮಹತ್ವದ್ದು ಎಂದು ಒತ್ತಿ ಹೇಳಿದ ದತ್ತ ಅವರು, ಇಂದಿನ ಸಂಕ್ರಮಣ ಕಾಲದಲ್ಲಿ ಪ್ರಜಾಪ್ರಭುತ್ವ ಎದುರಿಸುತ್ತಿರುವ ಸವಾಲುಗಳ ಬಗ್ಗೆ ವಿವರಿಸಿದರು.

50 ವರ್ಷಗಳ ಹಿಂದಿನ ತುರ್ತು ಪರಿಸ್ಥಿತಿಯ ಕರಾಳ ದಿನಗಳನ್ನು ಸ್ಮರಿಸಿದ ಅವರು, "ತುರ್ತು ಪರಿಸ್ಥಿತಿ ಎಂದರೆ ಪ್ರಜಾಪ್ರಭುತ್ವವನ್ನು ಬದಿಗೊತ್ತಿ ಏಕಚಕ್ರಾಧಿಪತ್ಯ ಸ್ಥಾಪಿಸುವುದು. ಸರಿ-ತಪ್ಪುಗಳ ವಿವೇಚನೆಯಿಲ್ಲದೆ ನಡೆಯುವ ಇಂತಹ ಆಡಳಿತ ವ್ಯವಸ್ಥೆ ಮತ್ತೆ ಬರಬಾರದು," ಎಂದರು.

ಸಂಸದೀಯ ವ್ಯವಸ್ಥೆಯಲ್ಲಿ ನಾವು ಯಾರ ಅಡಿಯಾಳುಗಳಲ್ಲ. ಪ್ರಜಾಪ್ರಭುತ್ವ ಗಟ್ಟಿಯಾಗಲು ಅಲ್ಲಮನ ತಾತ್ವಿಕತೆ, ಬಸವಣ್ಣನವರ ಜನಪರತೆ ಹಾಗೂ ಅಂಬಿಗರ ಚೌಡಯ್ಯನವರ ಆಕ್ರೋಶ (ಸಿಟ್ಟು) ಇಂದಿನ ಯುವಕರಲ್ಲಿ ಇರಬೇಕು ಎಂದು ಕರೆ ನೀಡಿದರು.

ಇಂದಿನ ತಲೆಮಾರು ಮಹಾತ್ಮ ಗಾಂಧೀಜಿಯವರನ್ನು ಅರಿಯುವುದು ಅನಿವಾರ್ಯ. ಈ ಸಂದರ್ಭದಲ್ಲಿ ಅವರು ಜಿ.ಎಸ್. ಶಿವರುದ್ರಪ್ಪ ಹಾಗೂ ಗೋಪಾಲಕೃಷ್ಣ ಅಡಿಗರ ಕವನಗಳನ್ನು ಉಲ್ಲೇಖಿಸಿ ಸಂಸದೀಯ ಮೌಲ್ಯಗಳ ಬಗ್ಗೆ ತಿಳಿಸಿಕೊಟ್ಟರು.ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ತುಮಕೂರು ವಿವಿ ಕುಲಪತಿ ಪ್ರೊ. ಎಂ. ವೆಂಕಟೇಶ್ವರಲು ಮಾತನಾಡಿ, ಯುವಕರು ಮನಸ್ಸು ಮಾಡಿದರೆ ಮಾತ್ರ ದೇಶದಲ್ಲಿ ಬದಲಾವಣೆ ತರಲು ಸಾಧ್ಯ. ವಿದ್ಯಾರ್ಥಿಗಳು ಸಕ್ರಿಯವಾಗಿ ರಾಜಕಾರಣಕ್ಕೆ ಬರಬೇಕು. ಎನ್‌ಎಸ್‌ಎಸ್ ಶಿಬಿರಗಳು ಶಿಸ್ತು, ಪ್ರಾಮಾಣಿಕತೆ ಮತ್ತು ನಾಯಕತ್ವ ಗುಣಗಳನ್ನು ಬೆಳೆಸುತ್ತವೆ ಎಂದರು.ಪರೀಕ್ಷಾಂಗ ಕುಲಸಚಿವರಾದ ಪ್ರೊ. ಮೋಹನ್ ಎಚ್.ಎಸ್ ಮಾತನಾಡಿ, ಯುವಜನತೆ ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಮತ್ತು ಗಾಂಧೀಜಿಯವರ ಸರಳತೆಯನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸೇವಾ ಯೋಜನ ಸಂಯೋಜಕರಾದ ಡಾ. ನಾಗಭೂಷಣ್ ಬಗ್ಗನಡು ಸ್ವಾಗತಿಸಿದರು. ವಿಜ್ಞಾನ ಕಾಲೇಜಿನ ಪ್ರಾಂಶುಪಾರಾದ ಪ್ರೊ. ಎಸ್. ಶ್ರೀನಿವಾಸ, ಕಲಾ ಕಾಲೇಜಿನ ಪ್ರಾಂಶುಪಾಲರಾದ ಡಾ. ಜಿ. ದಾಕ್ಷಾಯಿಣಿ, ಪ್ರೊ. ಎಂ. ಶೇಟ್ ಪ್ರಕಾಶ್, ಸೇರಿದಂತೆ ಹಲವಾರು ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಕುಡಿಯುವ ನೀರಿನ ಸಮಸ್ಯೆಗೆ ಸಹಾಯವಾಣಿ

ಚಿಕ್ಕನಾಯಕನಹಳ್ಳಿ: 2025-26ನೇ ಸಾಲಿನಲ್ಲಿ ತಾಲ್ಲೂಕಿನಲ್ಲಿ ಕುಡಿಯುವ

ನೀರಿನ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವ ಬಗ್ಗೆ ಹಾಗೂ ಸರಬರಾಜಾಗುತ್ತಿರುವ ನೀರು ಕಲುಷಿತವಾಗಿ ಅಥವಾ ಕಪ್ಪು, ಕೆಂಪು ಬಣ್ಣದ್ದಾಗಿ ನೀರು ಬರುತ್ತಿದ್ದಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಲು ತಾಲ್ಲೂಕಿನಲ್ಲಿ ಸಹಾಯವಾಣಿ ಕೇಂದ್ರ ತೆರೆಯಲಾಗಿದೆ. ದೂರ ವಾಣಿ ಕುಡಿಯುವ ನೀರಿನ ಸಮಸ್ಯೆ ತಿಳಿಸಬಹುದು ಹಾಗೂ ಸಮಸ್ಯೆಯನ್ನು ತಕ್ಷಣ ಪರಿಹರಿಸಿಕೊಳ್ಳಬಹುದು ಎಂದು ಚಿಕ್ಕನಾಯಕನಹಳ್ಳಿ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಾದ ದೊಡ್ಡಸಿದ್ದಯ್ಯ. ಡಿ ರವರು ತಿಳಿಸಿದ್ದಾರೆ.

ಸಂಖ್ಯೆ: 08133-267306 ಸಂಖ್ಯೆಗೆ ಸಾರ್ವಜನಿಕರು ಕರೆ ಮಾಡುವ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಬಹುದು

## ಕನ್ನಡ ಮೀಸಲಾತಿಗೆ 25ರ ಸಂಭ್ರಮ: ಬರಗೂರು ರಾಮಚಂದ್ರಪ್ಪ

## ತುಮಕೂರಿನಲ್ಲಿ ಬೆಳ್ಳಿ ಹಬ್ಬ ಆಚರಣೆಗೆ ಚಿಂತನೆ



ತುಮಕೂರು: ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ವೃತ್ತಿ ಶಿಕ್ಷಣ, ಉದ್ಯೋಗದಲ್ಲಿ ಮೀಸಲಾತಿ ದೊರಕಿಸಿಕೊಟ್ಟ ಕನ್ನಡತನಕ್ಕೆ ಇದೀಗ 25 ವರ್ಷ ತುಂಬುತ್ತಿದೆ. ಈ ಹಿನ್ನೆಲೆಯಲ್ಲಿ ತುಮಕೂರಿನಲ್ಲಿ ಬೃಹತ್ ಕಾರ್ಯಕ್ರಮ ಆಯೋಜಿಸಲು ಜಿಲ್ಲಾಡಳಿತ ಸಜ್ಜಾಗಿದೆ.

ಖ್ಯಾತ ಸಾಹಿತಿ ಹಾಗೂ ಬರಹಗಾರ ಡಾ: ಬರಗೂರು ರಾಮಚಂದ್ರಪ್ಪ ಅವರು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಕೈಗೊಂಡ ಪ್ರಾಧಿಕಾರದ ಪ್ರಮುಖ ನಿರ್ಧಾರಗಳಲ್ಲಿ 2001 ಜೂನ್ 4ರಂದು ವೃತ್ತಿಪರ ಶಿಕ್ಷಣ ಕೋರ್ಸುಗಳಿಗೆ ಆಯ್ಕೆಯಾಗುವ ರಾಜ್ಯದ ಅಭ್ಯರ್ಥಿಗಳಿಗೆ ಕನ್ನಡ ವ್ಯಾಸಂಗ ಮಾಡಿದಲ್ಲಿ ವಿಶೇಷ ಮೀಸಲಾತಿಯನ್ನು ಒದಗಿಸಿ ಸರ್ಕಾರ ಆದೇಶಿಸಿತ್ತು. ಇದರಿಂದ ರಾಜ್ಯದ ಹಲವಾರು ವಿದ್ಯಾರ್ಥಿಗಳು ಕನ್ನಡ ಮಾಧ್ಯಮ ವ್ಯಾಸಂಗ ಮಾಡಿ ವೃತ್ತಿಪರ ಕೋರ್ಸುಗಳಿಗೆ ಆಯ್ಕೆಯಾಗಿದ್ದರು. ಈ ಕ್ರಮಕ್ಕೆ ಇದೀಗ 25 ವರ್ಷಗಳು ಸಂದಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಮೀಸಲಾತಿಗೆ 25ರ ಸಂಭ್ರಮ ಕಾರ್ಯಕ್ರಮ ಆಯೋಜನೆಗೆ ಗೃಹ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ: ಜಿ. ಪರಮೇಶ್ವರ ಹಾಗೂ ತುಮಕೂರು ಜಿಲ್ಲಾಡಳಿತ ಚಿಂತನೆ ನಡೆಸಿದೆ.

ಈ ಸಂಬಂಧ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅವರು ಗುರುವಾರ ತಮ್ಮ ಕಚೇರಿಯಲ್ಲಿ ಡಾ: ಬರಗೂರು ರಾಮಚಂದ್ರಪ್ಪ ಅವರೊಂದಿಗೆ ಚರ್ಚೆ ನಡೆಸಿದ್ದು, ಕಾರ್ಯಕ್ರಮ ರೂಪುರೇಷೆಗಳು ಹಾಗೂ ದಿನಾಂಕದ ಕುರಿತಾಗಿ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಚರ್ಚಿಸಿ ಸಧ್ಯದಲ್ಲೇ ತೀರ್ಮಾನಿಸಲು ನಿರ್ಧರಿಸಿದ್ದಾರೆ.

ಈ ಸಂದರ್ಭದಲ್ಲಿ ಡಾ: ಬರಗೂರು ರಾಮಚಂದ್ರಪ್ಪ ಅವರು, ತಮ್ಮ ಅವಧಿಯಲ್ಲಿ 2001 ಜೂನ್ 4ರಂದು ವೃತ್ತಿಪರ ಶಿಕ್ಷಣ ಕೋರ್ಸುಗಳಿಗೆ ಕನ್ನಡ ಮೀಸಲಾತಿ, 2002 ಅಕ್ಟೋಬರ್ 24ರಂದು ಸರ್ಕಾರಿ ಹುದ್ದೆಗಳ ನೇಮಕಾತಿಯಲ್ಲಿ ಕನ್ನಡ ಮೀಸಲಾತಿ ಆದೇಶವನ್ನು ಸರ್ಕಾರ ನೀಡಿದೆ. ಇದರಿಂದ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ರಾಜ್ಯದ ಅಪಾರ ಪ್ರಮಾಣದ ವಿದ್ಯಾರ್ಥಿಗಳು ಸೌಲಭ್ಯಗಳನ್ನು ಪಡೆದು ಉತ್ತಮ ಸ್ಥಾನ ಹೊಂದಲು ಅವಕಾಶವಾಯಿತು. ಇದಲ್ಲದೆ, ತಮ್ಮ ಅವಧಿಯಲ್ಲಿ ಸಾಕಷ್ಟು ಕನ್ನಡಪರ ನಿರ್ಧಾರಗಳನ್ನು ತೆಗೆದುಕೊಂಡು ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಅಂತೆಯೇ ಸರ್ಕಾರವು ತಮ್ಮ ವರದಿಯನ್ನು ಅಂಗೀಕರಿಸಿ ಸರ್ಕಾರಿ ಆದೇಶಗಳನ್ನು ಹೊರಡಿಸಿ ಕನ್ನಡಿಗರಿಗೆ ನೆರವಾಗಿರುವುದನ್ನು ಅವರು ಸ್ಮರಿಸಿದರು.

ವೃತ್ತಿಪರ ಕೋರ್ಸುಗಳಿಗೆ ಕನ್ನಡ ಮೀಸಲಾತಿ ಆದೇಶವನ್ನು ತಂದು 25 ವರ್ಷಗಳು ಸಂದಿರುವ ಈ ಸಂದರ್ಭದಲ್ಲಿ ತುಮಕೂರು ಜಿಲ್ಲಾಡಳಿತದಿಂದ ಕನ್ನಡ ಮೀಸಲಾತಿ ಬೆಳ್ಳಿ ಹಬ್ಬ ಆಚರಿಸಲು ಮುಂದಾಗುತ್ತಿರುವುದು ಪ್ರಶಂಸನೀಯ. ಇದು ಕನ್ನಡಿಗರ ಮುಂಬರುವ ಪೀಳಿಗೆಗೆ ಅತ್ಯಂತ ಸ್ಫೂರ್ತಿಯ ಗುರುತಾಗಲಿದೆ ಎಂದರು.

## ವೃದ್ಧ ದಂಪತಿಗೆ ಬಿಪಿಎಲ್ ಕಾರ್ಡು

## ಮಾನವೀಯತೆ ಮೆರೆದ ಡಿ.ಸಿ



ತುಮಕೂರು: ತಮ್ಮ ಮಗ ತೆರಿಗೆ ಪಾವತಿದಾರರು ಎಂಬ ಕಾರಣಕ್ಕೆ ಆದ್ಯತಾ ಪಡಿತರ ಚೀಟಿಯನ್ನು ಆದ್ಯತೇತರ ಪಡಿತರ ಚೀಟಿ ಎಂದು ಪರಿಗಣಿಸಿ ಬಿಪಿಎಲ್ ಪಡಿತರ ಚೀಟಿಯನ್ನು ರದ್ದುಪಡಿಸಲಾಗಿದ್ದ ಸಂಬಂಧ ಸೌಲಭ್ಯದಿಂದ ವಂಚಿತರಾಗಿದ್ದ ವೃದ್ಧ ದಂಪತಿಗೆ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅವರ ಮಧ್ಯ ಪ್ರವೇಶದಿಂದ ಪುನರ್ ಪರಿಶೀಲಿಸಿ ಬಿಪಿಎಲ್ ಪಡಿತರ ಚೀಟಿ ನೀಡಿ ಆಹಾರ ಪದಾರ್ಥವನ್ನು ನೀಡಿದ ಘಟನೆ ತುಮಕೂರು ಜಿಲ್ಲಾಧಿಕಾರಿ ಕಚೇರಿಯಲ್ಲಿ ಗುರುವಾರ ನಡೆಯಿತು.

ಗುಬ್ಬಿ ತಾಲ್ಲೂಕು ಚೇಳೂರಿನ ಚೆನ್ನಬಸಮ್ಮ ಅವರು ತಮ್ಮ ಪತಿ ಹಾಗೂ ಮೂವರು ಮಕ್ಕಳೊಂದಿಗೆ ವಾಸಿಸುತ್ತಿದ್ದಾರೆ. ಇವರ ಒಬ್ಬ ಮಗ ಬ್ಯಾಂಕ್ ಸಾಲ ಪಡೆದ ಕಾರಣ ಆದಾಯ ತೆರಿಗೆ ಪಾವತಿದಾರರೆಂದು ಪರಿಗಣಿಸಿದ ಹಿನ್ನೆಲೆಯಲ್ಲಿ ಈ ಕುಟುಂಬದ ಬಿಪಿಎಲ್ ಪಡಿತರ ಚೀಟಿಯನ್ನು ಎಪಿಎಲ್ ಎಂದು ಪರಿಗಣಿಸಲಾಗಿತ್ತು.

ವೃದ್ಧ ತಂದೆ ತಾಯಿಯಿಂದ ಪ್ರತ್ಯೇಕವಾಗಿ ವಾಸಿಸುತ್ತಿರುವ ಮಗ ಪೋಷಕರ ಯೋಗಕ್ಷೇಮ ನೋಡಿಕೊಳ್ಳುತ್ತಿಲ್ಲ ಹಾಗೂ ಪೋಷಕರಿಗೆ ಯಾವುದೇ ಕೃಷಿ ಭೂಮಿ ಇಲ್ಲದಿರುವ ಬಗ್ಗೆ ಜಿಲ್ಲಾಧಿಕಾರಿಯವರ ಸೂಚನೆಯೊಂದಿಗೆ ಮತ್ತೊಮ್ಮೆ ಆಹಾರ ನಿರೀಕ್ಷಕರು ಸ್ಥಳ ಪರಿಶೀಲನೆ ನಡೆಸಿ, ವರದಿ ನೀಡಿದ ಆಧಾರದ ಮೇಲೆ ಚೇಳೂರಿನ ಚೆನ್ನಬಸಮ್ಮ ಕೋಂ ರಾಜಣ್ಣ ಇವರ ಪಡಿತರ ಚೀಟಿಯಲ್ಲಿ ಮಗನ ಹೆಸರನ್ನು ಕೈಬಿಟ್ಟು ಪುನಃ ಬಿಪಿಎಲ್ ಕುಟುಂಬ ಎಂದು ಪರಿಗಣಿಸಿ ಆದೇಶಿಸಿದ್ದರು. ಈ ಹಿನ್ನೆಲೆಯಲ್ಲಿ ಚೆನ್ನಬಸಪ್ಪ ಅವರಿಗೆ ಆದ್ಯತಾ ಪಡಿತರ ಚೀಟಿಯನ್ನು ಪುನರ್ ಸ್ಥಾಪಿಸಿ ಬಿಪಿಎಲ್ ಪಡಿತರ ಚೀಟಿ ವಿತರಣೆ ಮಾಡುವ ಜೊತೆಗೆ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅವರು ವೃದ್ಧ ದಂಪತಿಗೆ ಪಡಿತರ ಅಕ್ಕಿ ವಿತರಿಸಿದರು.

ಕಳೆದ 5 ತಿಂಗಳ ಹಿಂದೆ ಆಹಾರ ನಿರೀಕ್ಷಕರು ಬಿಪಿಎಲ್ ಪಡಿತರ ಚೀಟಿದಾರರ ಸ್ಥಳ ಪರಿಶೀಲನೆ ಸಂದರ್ಭದಲ್ಲಿ ವ್ಯಕ್ತವಾದ ಅಂಶದ ಹಿನ್ನೆಲೆಯಲ್ಲಿ ಚೆನ್ನಬಸಮ್ಮ ಅವರ ಪಡಿತರ ಚೀಟಿ (ಪುಟ-4)

## ಸ್ವಾತಂತ್ರ್ಯ ಹೋರಾಟ ಸ್ಮರಣೆಗಾಗಿ ಭವನ ನಿರ್ಮಾಣ:ಟಿಬಿಜೆ

### ಶಿರಾದಲ್ಲಿ ಸುಮಾರು 6 ಕೋಟಿ ರೂಗಳ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಂಕುಸ್ಥಾಪನೆ



ಶಿರಾ:ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಶಿರಾ ತಾಲೂಕಿನ 100ಕ್ಕೂ ಹೆಚ್ಚು ಮಂದಿ ಭಾಗಿಯಾಗಿ ಹುತಾತ್ಮರಾಗಿದ್ದು, ಅವರ ಸ್ಮರಣೆಗಾಗಿ ಹಾಗೂ ಮುಂದಿನ ಪೀಳಿಗೆಗೆ ಅವರ ಹೋರಾಟದ ಮಹತ್ವವನ್ನು ತಿಳಿಸು ಉದ್ದೇಶದಿಂದ ನಗರದಲ್ಲಿ ಸ್ವಾತಂತ್ರ್ಯ ಭವನ ನಿರ್ಮಾಣ ಮಾಡಲಾಗುತ್ತಿದೆ ಎಂದು ಶಾಸಕ ಟಿ.ಬಿ.ಜಯಚಂದ್ರ ಹೇಳಿದರು.

ಅವರು ಶಿರಾ ನಗರದಲ್ಲಿ ಗುರುವಾರ ಸ್ವಾತಂತ್ರ್ಯ ಭವನ ಹಾಗೂ ಕನ್ನಡ ಭವನ ಸೇರಿದಂತೆ ಸುಮಾರು 5 ಕೋಟಿ ರೂಗಳ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು. ಸ್ವಾತಂತ್ರ್ಯ ಹೋರಾಟದಲ್ಲಿ ಶಿರಾಕ್ಕೆ ನಂಟಿರುವ ಕಾರಣ ಇಲ್ಲಿ ಒಂದು ಸ್ವಾತಂತ್ರ್ಯ ಭವನ ನಿರ್ಮಾಣ ಮಾಡಲು ಇದಕ್ಕಾಗಿ ಸ್ಥಳವನ್ನೂ ಮೀಸಲಿಟ್ಟಿದ್ದು, ಇಂದು ಸುಮಾರು 50 ಲಕ್ಷ ರೂ. ವೆಚ್ಚದಲ್ಲಿ ಭವನ ನಿರ್ಮಾಣವಾಗಲಿದೆ. ಈ ಸ್ವಾತಂತ್ರ್ಯ ಭವನದಲ್ಲಿ ಶಿರಾ ತಾಲೂಕಿನಾದ್ಯಂತ ಸ್ವತಂತ್ರಕ್ಕಾಗಿ ಹೋರಾಟ ಮಾಡಿದ ಮಹನೀಯರ ಹೆಸರುಗಳನ್ನು ಸ್ವಾತಂತ್ರ ಭವನದಲ್ಲಿ ಹಾಕುವುದರ ಮೂಲಕ ಅವರ ಸೇವೆಯನ್ನು ಸ್ಮರಿಸಲಾಗುವುದು ಎಂದರು.

ಶಿರಾ ನಗರಸಭಾ ವ್ಯಾಪ್ತಿಯ ಚಂಗಾವರ ರಸ್ತೆಯ ಬಳಿ ವೆಟ್ ವೆಲ್ ಕಾಂಪೌಂಡ್ ನಿರ್ಮಾಣದ ಕಾಮಗಾರಿ, ಸರಕಾರಿ ಹಿಂದುಳಿದ ವರ್ಗ ಬಾಲಕಿಯರ ವಿದ್ಯಾರ್ಥಿ ನಿಲಯಕ್ಕೆ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣ ಕಾಮಗಾರಿ, ಹಾಗೂ ಸರಕಾರಿ ಬಾಲಕಿಯ ಪದವಿ ಪೂರ್ವ ಕಾಲೇಜಿನ ಶುದ್ಧ ಕುಡಿಯುವ ನೀರಿನ ಘಟಕವನ್ನು ಉದ್ಘಾಟಿಸಿದರು. ಪೌರಕಾರ್ಮಿಕರಿಗೆ 40 ಲಕ್ಷ ರೂಪಾಯಿಗಳ ವಿಮೆ, ಸುರಕ್ಷಾ ಸಾಮಗ್ರಿಗಳು ಮತ್ತು ಸಮವಸ್ತ್ರ ವಿತರಿಸಿದರು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷ ಜೀಶಾನ್ ಮೊಹಮದ್, ಉಪಾಧ್ಯಕ್ಷ ಲಕ್ಷ್ಮಿಕಾಂತ್, ನಗರ ಸಭೆಯ ಆಯುಕ್ತ ರುದ್ರೇಶ್, ನಗರಸಭೆ ಸದಸ್ಯರುಗಳಾದ ಅಜಯ್ ಕುಮಾರ್, ರಫೀವುಲ್ಲಾ, ಸಫೀರ್, ರಾಧಾಕೃಷ್ಣ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ಪಿ.ಪಾಂಡುರಂಗಪ್ಪ, ರೇಣುಕಮ್ಮ, ನಗರಸಭೆ ಇಂಜಿನಿಯರ್ ಕೆಂಚಪ್ಪ, ಹಿಂದುಳಿದ ವರ್ಗಗಳ ಅಧಿಕಾರಿ ಕುಮುದ, ವಕೀಲರ ಸಂಘದ ಅಧ್ಯಕ್ಷ ಎಚ್.ಗುರುಮೂರ್ತಿ ಗೌಡ, ಮುಖಂಡರಾದ ವಿಜಯ್ ಕುಮಾರ್, ನಗರಸಭೆ ಆಶ್ರಯ ವಿಷಯ ನಿರ್ವಾಹಕ ಶ್ರೀನಿವಾಸ್, ಸೀನಿಯರ್ ಪ್ರೋಗ್ರಾಮರ್ ಚಿದಾನಂದ್ ಸೇರಿದಂತೆ ಹಲವರು ಹಾಜರಿದ್ದರು.

ಪ್ರೀತಿಯ ನೆಚ್ಚಿನ ಓದುಗ ಮಿತ್ರರೇ ಸೂರ್ಯಪ್ರಗತಿ ಕನ್ನಡ ದಿನಪತ್ರಿಕೆಯ ಸುದ್ದಿಗಳನ್ನ ಅಂತರ್ಜಾಲ ತಾಣ ವೆಬ್ ಆವೃತ್ತಿ https://suryapragathi.com ನಲ್ಲಿ ಹಾಗೂ https://epaper.suryapragathi.com ನಲ್ಲಿ ಓದಬಹುದು – ನೋಡಬಹುದು ಹೆಚ್ಚಿನ ಮಾಹಿತಿಗಾಗಿ 9901010109

## ಅಂತರ್ಯಾಮಿ ಇಂದು ರಾಜ್ಯಾದ್ಯಂತ ಚಿತ್ರಮಂದಿರಗಳಲ್ಲಿ ಬಿಡುಗಡೆ



ತುಮಕೂರು: ಸ್ಪರ್ಧಾತ್ಮಕ ಯುಗದಲ್ಲಿ ಯುವಕರಿಗೆ ಮಾರಕವಾಗಿರುವ ಆನ್‌ಲೈನ್ ಗೇಮ್, ಸಾಮಾಜಿಕ ಜಾಲತಾಣದ ಪ್ರಸ್ತುತದ ವಸ್ತು ಸ್ಥಿತಿಗಳ ಬಗ್ಗೆ ಅರಿತು ಜೀವನಕ್ಕೆ ಬೆಳಕಾಗುವ ಅಂತರಾಳಕ್ಕೆ ಕರೆದ್ಯೂಯುವ ಚಿತ್ರಕಥೆಯನ್ನಾಧಾರಿತ "ಅಂತರ್ಯಾಮಿ" ಮಾರ್ಚ್ 6.ರಂದು ರಾಜ್ಯಾದ್ಯಂತ ನೆಚ್ಚಿನ ಚಿತ್ರಮಂದಿರಗಳಲ್ಲಿ ಬಿಡುಗಡೆ ಗೊಳ್ಳುತ್ತಿದೆ ಎಂದು ನಿರ್ದೇಶಕ ಕೆ. ಧನಂಜಯ ಅವರು ತಿಳಿಸಿದರು.

ನಗರದ ಕಾರ್ಯನಿರತ ಪತ್ರಕರ್ತರ ಸಭಾಂಗಣದಲ್ಲಿ ಗುರುವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಅಂತರ್ಯಾಮಿ ಚಲನಚಿತ್ರದ ಕಥಾ ಹಂದರವಿದ್ದು, ಸಾಮಾಜಿಕ ಜಾಲತಾಣದ ಕರಾಳ ಮುಖವನ್ನು ತೆರದಿಡಲಿದೆ. ಈ ಚಿತ್ರ ಕುಟುಂಬ ಸಮಾಜ ಮತ್ತು ಸ್ನೇಹತ್ವದ ಮಹತ್ವವನ್ನು ತಿಳಿಸುತ್ತದೆ, ಜೀವನದ ಹಾದಿ ಉಜ್ವಲ ಭವಿಷ್ಯಕ್ಕೆ ಕಣ್ಣುತೆರೆಸುವ ಕಥೆಯನ್ನು ಒಳಗೊಂಡಿದೆ. ಮನರಂಜನೆ ಹಾಸ್ಯ ಮತ್ತು ಸಸ್ಪೆನ್ಸ್ ಥ್ರಿಲ್ಲರ್ ವಿಷಯಗಳಿದ್ದು ಕುಟುಂಬ ಸಮೇತವಾಗಿ ನೋಡಬಹುದಾದ ಚಿತ್ರವಾಗಿದೆ ಎಂದರು.

ಚಿತ್ರಕ್ಕೆ ಸಾಹಿತ್ಯ ನೀಡಿರುವ ಸಿದ್ಧಾರ್ಥ ಮಾಧ್ಯಮ ಅಧ್ಯಯನ ಕೇಂದ್ರದ ಹಳೆ ವಿದ್ಯಾರ್ಥಿ ವಿನಯ್ ಕಾವ್ಯಕಾಂತಿ ಮಾತನಾಡಿ ಯುವ ಸಮುದಾಯವನ್ನ ಸಾಮಾಜಿ ಜಾಲತಾಣದ ವ್ಯಸನದಿಂದ ಎಚ್ಚರಗೊಳಿಸುವ ಸಾಹಿತ್ಯದ ಹಾಡು ಹಾಗೂ ಚಿತ್ರ ಸಂಭಾಷಣೆ ಮತ್ತು ಸಾಹಿತ್ಯಕ್ಕೆ ಪೂರಕವಾದ ಸಂಗೀತವನ್ನ ನಾದಬ್ರಹ್ಮ ಸಂಗೀತ ದಿಗ್ಗಜ ಹಂಸಲೇಖ ಅವರ ಶಿಷ್ಯ ದೇಸಿ ಮೋಹನ್ ನೀಡಿದ್ದಾರೆ. ಇವರ ಸಂಗೀತ ಪ್ರೇಕ್ಷಕರಿಗೆ ಮುದನೀಡಲಿದೆ ಎಂದರು.

ನಿರ್ಮಾಪಕ ನವೀನ್ ಎನ್.ಜಿ ಮಾತನಾಡಿ ಈ ಚಿತ್ರವನ್ನು 25 ದಿನಗಳಲ್ಲಿ ತುಮಕೂರಿನ ಸಿದ್ದಗಂಗಾ ಮಠ, ಎಸ್‌ಎಸ್‌ಐಟಿ ಕಾಲೇಜು, ಬಂಡೆಮಠ, ಸೋಮವಾರಪೇಟೆ, ಮಾದಾಪುರ ಸೇರಿದಂತೆ ರಾಜ್ಯದ ಇತರೆ ನಿಸರ್ಗದ ತವರಿನಲ್ಲಿ ಚಿತ್ರಿಕರಿಸಲಾಗಿದೆ.



ಇದು ಗುರು ರೇಣುಕಾ ಪ್ರೊಡಕ್ಷನ್‌ನ ನಿರ್ಮಾಣದ ಚೊಚ್ಚಲ ಚಿತ್ರವಾಗಿದೆ ಎಂದು ಹೇಳಿದರು. ಅರವಿಂದ್ ರಾಜ್ ಅವರ ಸಂಕಲನದೊಂದಿಗೆ ಬಾಲು ಮಾಸ್ಟರ್ ಅವರ ನೃತ್ಯ ಸಂಯೋಜನೆ ಇದೆ. ಪೃಥ್ವಿ ಭಟ್ ಮೇಘನಾ ಕುಲಕರ್ಣಿ ಅವರು ದೇಸಿ ಮೋಹನ್ ರವರ ಸಂಗೀತಕ್ಕೆ ಧ್ವನಿಯಾಗಿದ್ದಾರೆ. ಚೊಚ್ಚಲ ಬಾರಿಗೆ ನಿಭಾಯಿಸಿದ್ದು ಚಿತ್ರಕ್ಕೆ ಎಸ್ ಬಾಲು ಅವರ ಛಾಯಾಗ್ರಹಣವಿದೆ. ಶ್ರೀ ಸಿದ್ಧಾರ್ಥ ಮಾಧ್ಯಮ ಕೇಂದ್ರದ ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರು ಚಿತ್ರದಲ್ಲಿ ಅಭಿನಯಿಸಿದ್ದಾರೆ ಎಂದು ಅವರು ವಿವರಿಸಿದರು.

ಪತ್ರಿಕಾ ಗೋಷ್ಠಿಯಲ್ಲಿ ಹಾಜರಿದ್ದ ಸಮಷ್ಠಿ ಗ್ಲೋಬಲ್ ಫೌಂಡೇಶನ್ ಗುರುಕುಲ ಮಿಷನ್‌ನ ಶ್ರೀಮತಿ ವಾಣಿ ಮಾತನಾಡಿ ಯುವಕರನ್ನು ಜಾಗೃತಗೊಳಿಸುವ ಸಾಮಾಜಿಕ ಕಳಕಳಿಯ ಕಥಾವಸ್ತು ಚಿತ್ರವಾಗಿ ಅಂತರ್ಯಾಮಿ ರೂಪಗೊಂಡಿರುವುದರಿಂದ ರಾಜ್ಯವ್ಯಾಪ್ತಿ ಶಾಲಾ ಕಾಲೇಜುಗಳಲ್ಲಿ ಈ ಚಿತ್ರದ ಪ್ರದರ್ಶನವನ್ನ ತಮ್ಮ ಸಂಸ್ಥೆಯ ವತಿಯಿಂದ ಮಾಡುವುದಾಗಿ ತಿಳಿಸಿದರು.

ಚಿತ್ರದ ನಾಯಕಿ ಮೊಹಿರಾ ಆಚಾರ್ಯ, ನಟಿ ಬೇಬಿ ಹಾನ್ವಿ, ನಾಯಕ ನಟ ಮತ್ತು ನಿರ್ಮಾಪಕರಾದ ಪ್ರಣವ್. ಸಹ ನಿರ್ಮಾಪಕರಾದಡಾ.ಕಮಲಾನರಸಿಂಹನ್, ಕರ್ನಾಟಕ ಸಂಸ್ಕೃತಿ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷರಾದ ನಟರಾಜ್, ಕಲಾವಿದ ತುಮಕೂರು ಕಿಟ್ಟಿ ಪತ್ರಿಕಾಗೋಷ್ಠಿಯಲ್ಲಿ ಚಲನಚಿತ್ರದ ಅನುಭವವನ್ನ ಹಂಚಿಕೊಂಡರು. ಶ್ರೀ ಸಿದ್ಧಾರ್ಥ ಮಧ್ಯಮ ಅಧ್ಯಯನ ಕೇಂದ್ರದ ನಿರ್ದೇಶಕರಾದ ಡಾ. ಬಿ.ಟಿ. ಮುದ್ದೇಶ್ ಚಿತ್ರ ತಂಡವನ್ನ ಪರಿಚಯಿಸಿದರು. ಗುರುರೇಣುಕಾ ಪ್ರೊಡಕ್ಷನ್ಸ್ ನಿರ್ಮಾಣ ಚಿತ್ರ ಡಾ॥ ಲೀಲಾವತಿ ಕಂಬೈನ್ಸ್ ವತಿಯಿಂದ ಅಂತರ್ಯಾಮಿ ತುಮಕೂರು, ಬೆಂಗಳೂರು ಹಾಗೂ ಕರ್ನಾಟಕ ರಾಜ್ಯಾದಂತ್ಯ ಪ್ರದರ್ಶನಗೊಳ್ಳಲಿದೆ. ಇದೇ ಸಂದರ್ಭದಲ್ಲಿ ಅಂತರ್ಯಾಮಿ ಚಿತ್ರದ ಹಾಡನ್ನು ಬಿಡುಗಡೆಮಾಡಲಾಯಿತು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

## ವೃದ್ಧ ದಂಪತಿಗೆ ಬಿಪಿಎಲ್ ಕಾರ್ಡು

ಆದ್ಯತೇತರ ಪಡಿತರ ಚೀಟಿಯೆಂದು ಪರಿಗಣಿಸಲಾಗಿತ್ತು. ಈ ವಿಷಯದ ಬಗ್ಗೆ ಅರ್ಜಿದಾರರು ಗುಬ್ಬಿ ತಾಲ್ಲೂಕು ತಹಶೀಲ್ದಾರ್ ಅವರಿಗೆ ಅರ್ಜಿ ಸಲ್ಲಿಸಿ ವಾಸ್ತವ ಅಂಶವನ್ನು ವಿವರಿಸಿದ್ದರು. ಗುರುವಾರ ಜಿಲ್ಲಾಧಿಕಾರಿ ಕಚೇರಿಗೆ ಪಡಿತರ ಚೀಟಿದಾರರಾದ ಚೆನ್ನಬಸಮ್ಮ ಮತ್ತು ಅವರ ಪತಿ ರಾಜಣ್ಣ ಅವರನ್ನು ಆಹ್ವಾನಿಸಿ ಪರಿಷ್ಕೃತ ಬಿಪಿಎಲ್ ಕಾರ್ಡು ಜೊತೆಗೆ ಅಕ್ಕಿಯನ್ನೂ ವಿತರಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಚೆನ್ನಬಸಮ್ಮ ಅವರು ಕಳೆದ 5 ತಿಂಗಳಿಂದ ಪಡಿತರ ಅಕ್ಕಿ ಇಲ್ಲದೆ ಸಮಸ್ಯೆ ಅನುಭವಿಸಬೇಕಾಯಿತು. ಕೊನೆಗೆ ಅಧಿಕಾರಿಗಳ ಮಧ್ಯ ಪ್ರವೇಶದಿಂದ ಅನುಕೂಲವಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಜಂಟಿ ನಿರ್ದೇಶಕಿ ಸೌಮ್ಯ ಉಪಸ್ಥಿತರಿದ್ದರು.

## ಮೊತ್ತ ಮೊದಲ ಬಾರಿಗೆ ಬಸ್ ನಿಲ್ದಾಣಗಳಲ್ಲಿ ಬಜೆಟ್ ನೇರ ಪ್ರಸಾರ

ಬೆಂಗಳೂರು: ಸನ್ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾರ್ಚ್ 6 ರಂದು (ಶುಕ್ರವಾರ) ವಿಧಾನಸೌಧದಲ್ಲಿ ಮಂಡಿಸಲಿರುವ 202627ನೇ ಸಾಲಿನ ರಾಜ್ಯದ ಆಯವ್ಯಯದ ಬಜೆಟ್ ಭಾಷಣವನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ರಾಜ್ಯದ ಆಯ್ದ ಬಸ್ ನಿಲ್ದಾಣಗಳಲ್ಲಿರುವ ಎಲ್ಇಡಿ ಮತ್ತು ಟಿವಿ ಪರದೆಗಳ ಮೂಲಕ ಮೊತ್ತ ಮೊದಲ ಬಾರಿಗೆ ನೇರ ಪ್ರಸಾರ ಮಾಡುತ್ತಿದೆ.

ಆರ್ಥಿಕ ಸಚಿವರೂ ಆಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 17ನೇ ಬಾರಿ ಬಜೆಟ್ ಮಂಡಿಸುವ ಮೂಲಕ ಹೊಸ ದಾಖಲೆ ಸೃಷ್ಟಿಸುತ್ತಿದ್ದಾರೆ. ಈ ಮಹತ್ವದ ಬಜೆಟ್ ಮಂಡನೆಯ ನೇರ ಪ್ರಸಾರವನ್ನು ರಾಜ್ಯದ ಜನತೆಗೆ ತಲುಪಿಸಲು ವಿಶೇಷ ವ್ಯವಸ್ಥೆ ಮಾಡಲಾಗಿದೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾದ ಹೇಮಂತ್ ಎಂ. ನಿಂಬಾಳ್ಕರ್, ಐಪಿಎಸ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ (ಡಿಐಪಿಆರ್)ಯು ಬೆಂಗಳೂರು ಮೂಲದ ವೃತ್ತಿ ಮೀಡಿಯಾ ಸಲ್ಯೂಷನ್ಸ್ ಸಂಸ್ಥೆಯ ಸಹಭಾಗಿತ್ವದಲ್ಲಿ ರಾಜ್ಯದಾದ್ಯಂತ ಇರುವ 230 ಸರ್ಕಾರಿ ಬಸ್ ನಿಲ್ದಾಣಗಳಲ್ಲಿ ಅಳವಡಿಸಿರುವ ಡಿಜಿಟಲ್ ಡಿಸ್ಲೇ (ಎಲ್ಇಡಿ) ಮತ್ತು ಟಿವಿ ಪರದೆಗಳ ಮೂಲಕ ಬಜೆಟ್ ಮಂಡನೆಯ ನೇರ ಪ್ರಸಾರವನ್ನು ಮಾರ್ಚ್ 6 ರಂದು ಬೆಳಿಗ್ಗೆ 10.15 ಗಂಟೆಯಿಂದ ಪ್ರಸಾರ ಮಾಡಲಿದೆ ಎಂದು ಆಯುಕ್ತರು ತಿಳಿಸಿದ್ದಾರೆ.

ವಿಧಾನಸೌಧದಲ್ಲಿ ನಡೆಯುವ ಬಜೆಟ್ ಮಂಡನೆ ಹಾಗೂ ನಂತರ ನಡೆಯಲಿರುವ ಮುಖ್ಯಮಂತ್ರಿಗಳ ಪತ್ರಿಕಾಗೋಷ್ಠಿಯನ್ನೂ ಇದೇ ಪರದೆಗಳ ಮೂಲಕ ರಾಜ್ಯದ ವಿವಿಧ ಬಸ್ ನಿಲ್ದಾಣಗಳಲ್ಲಿ ನೇರವಾಗಿ ಪ್ರಸಾರ ಮಾಡಲಾಗುತ್ತದೆ. ಇದರ ಮೂಲಕ ಸಾರ್ವಜನಿಕರು ಬಸ್ ನಿಲ್ದಾಣಗಳಲ್ಲಿಯೇ ಈ ಮಹತ್ವದ ಕಾರ್ಯಕ್ರಮವನ್ನು ವೀಕ್ಷಿಸುವ ಅವಕಾಶವನ್ನು ಪಡೆಯಲಿದ್ದಾರೆ.

ರಾಜ್ಯದಲ್ಲಿಯೇ ಮೊದಲ ಬಾರಿಗೆ ಬಸ್ ನಿಲ್ದಾಣಗಳ ಮೂಲಕ ಜನಸಾಮಾನ್ಯರಿಗೆ ಬಜೆಟ್ ಮಂಡನೆಯ ನೇರ ಪ್ರಸಾರವನ್ನು ತಲುಪಿಸುವ ಪ್ರಯತ್ನವನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕೈಗೊಂಡಿದೆ. ಸಾರ್ವಜನಿಕರು ಈ ನೇರ ಪ್ರಸಾರದ ಸದುಪಯೋಗವನ್ನು ಪಡೆದುಕೊಳ್ಳುವಂತೆ ಆಯುಕ್ತರು ಮನವಿ ಮಾಡಿದ್ದಾರೆ.

## ಮಾ18 ರಿಂದ ಏ 13 ರ ವರೆಗೆ ಎಸ್ಎಸ್ಎಲ್ಸಿ ಪರೀಕ್ಷೆ



ಮಧುಗಿರಿ: ಮಾರ್ಚ್ 18 ರಿಂದ ಏ 13 ರ ವರೆಗೆ ಎಸ್.ಎಸ್.ಎಲ್.ಸಿ ವಿಧ್ಯಾರ್ಥಿಗಳಿಗೆ ಪರೀಕ್ಷೆ ನಡೆಯಲಿದ್ದು ನಮ್ಮ ತಾಲ್ಲೂಕಿನಲ್ಲಿ 14 ಪರೀಕ್ಷ ಕೇಂದ್ರಗಳಲ್ಲಿ ಪರೀಕ್ಷೆ ನಡಯುತ್ತೆದೆ ಎಂದು ತಹಶೀಲ್ದಾರ್ ಶ್ರೀನಿವಾಸ್ ತಿಳಿದರು.

ತಾಲ್ಲೂಕು ಕಛೇರಿಯಲ್ಲಿ ಪತ್ರಿಕಾ ಗೋಷ್ಠಿ ನಡೆಸಿ ಮಾತನಾಇದ ಅವರು, ಪರೀಕ್ಷ ಕೇಂದ್ರಗಳಿಗೆ ಜಿಲ್ಲಾಧಿಕಾರಿಗಳು ತಂಡಗಳನ್ನು ರಚಿಸಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ಎಲ್ಲಾ ಅಗತ್ಯ ರೀತಿಯ ಮೂಲ ಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿ. ವಿದ್ಯಾರ್ಥಿಗಳು ಆತಂಕಪಡುವ ಅಗತ್ಯವಿಲ್ಲ. ಉತ್ತಮ ಫಲಿತಾಂಶ ಪಡೆಯುವ ನಿಟ್ಟಿನಲ್ಲಿ ಶ್ರಮಿಸಿ ಆತ್ಮವಿಶ್ವಾಸದಿಂದ ಪರೀಕ್ಷೆ ಬರೆಯಬೇಕು ಎಂದು ಕರೆ ನೀಡಿದರು. ಪರೀಕ್ಷಾ ದಿನಗಳಲ್ಲಿ ವಿದ್ಯಾರ್ಥಿಗಳಿಗೆ ಬಸ್ ವ್ಯವಸ್ಥೆ, ವಿದ್ಯುತ್ ಸಂಪರ್ಕ ಸೇರಿದಂತೆ ಯಾವುದೇ ರೀತಿಯ ಸಮಸ್ಯೆ ಉಂಟಾಗದಂತೆ ಎಲ್ಲಾ ಇಲಾಖೆಯ ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದರು.

ಬಿಇಓ ಹನುಮಂತರಾಯಪ್ಪ ಮಾತನಾಡಿ, ಈ ಬಾರಿ ನಮ್ಮ ತಾಲೂಕಿನಲ್ಲಿ ಶೇ 90 ರಷ್ಟು ಫಲಿತಾಂಶ ಬರವ ನೀರಿಕ್ಷೆಯಿದ್ದು 7 ರದ್ದು ಮಾಹ ಪೋಷಕರ ಸಭೆಯನ್ನು ಎಲ್ಲಾ ಶಾಲೆಗಳಲ್ಲಿ ಹಮ್ಮಿಕೊಂಡಿದ್ದು ಸೂಕ್ತ ಸಲಹೆಗಳನ್ನು ಶಿಕ್ಷಕರು ಪೋಷಕರ ಜೊತೆ ಚರ್ಚಿಸಲಿದ್ದಾರ ಎಂದರು

ಈ ಸಂಧರ್ಭದಲ್ಲಿ : ಬಿಇಓ ಹನುಮಂತರಾಯಪ್ಪ, ಪುರಸಭೆ ಮುಖ್ಯಾಧಿಕಾರಿ ಸುರೇಶ್, ಸಿಪಿಐ ಹನುಮಂತರಾಯಪ್ಪ, ಇಓ ಲಕ್ಷ್ಮಣ್ ಸೇರಿದಂತೆ ಅಧಿಕಾರಿಗಳು ಉಪಸ್ಥಿತರಿದ್ದರು.

ಪರೀಕ್ಷೆ ನಡೆಯುವ ಕೇಂದ್ರಗಳು ಮತ್ತು ವಿದ್ಯಾರ್ಥಿಗಳ ಸಂಖ್ಯೆ ಹೀಗಿದೆ:

ಸರ್ಕಾರಿ ಪದವಿ ಪೂರ್ವ ಕಾಲೇಜು, ಮಧುಗಿರಿ 385
ಜುಪಿಟರ್ ಪ್ರೌಢಶಾಲೆ, ಮಧುಗಿರಿ 346
ಸರ್ಕಾರಿ ಪದವಿ ಪೂರ್ವ ಕಾಲೇಜು ಹಿಂಭಾಗ 322
ಸರ್ಕಾರಿ ಪ್ರೌಢಶಾಲೆ, ಪುರವಾರ 288
ಸರ್ಕಾರಿ ಪದವಿ ಪೂರ್ವ ಕಾಲೇಜು, ಐಡಿ ಹಳ್ಳಿ 313
ಸರ್ವೋದಯ ಪದವಿ ಪೂರ್ವ ಕಾಲೇಜು, ಕೊಡಿಗೇನಹಳ್ಳಿ 393
ಶ್ರೀರಂಗನಾಥ ಗ್ರಾಮಾಂತರ ಪ್ರೌಢಶಾಲೆ, ನೇರಳೆಕೆರೆ 189ಸರ್ಕಾರಿ ಪದವಿ ಪೂರ್ವ ಕಾಲೇಜು, ಬ್ಯಾಲ್ಯ 156ಕರ್ನಾಟಕ ಪಬ್ಲಿಕ್ ಶಾಲೆ, ಮಿಡಿಗೇಶಿ 292
ಸರ್ಕಾರಿ ಪ್ರೌಢಶಾಲೆ, ಬಡವನಹಳ್ಳಿ 365
ಸಿದ್ದಗಂಗಾ ಗ್ರಾಮಾಂತರ ಪ್ರೌಢಶಾಲೆ, ಗಂಜಲಗುಂಟೆ 168ಸರ್ಕಾರಿ ಪ್ರೌಢಶಾಲೆ, ಕಡಗತ್ತೂರು 70
ಸರ್ಕಾರಿ ಪ್ರೌಢಶಾಲೆ, ದಬ್ಬೇಘಟ್ಟ 295
ಗ್ರಾಮಾಂತರ ಸನಿವಾಸ ಪ್ರೌಢಶಾಲೆ, ಹೊಸಕೆರೆ 142

ವಿದ್ಯಾರ್ಥಿಗಳು ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ಶಾಂತಿಯುತವಾಗಿ ಪರೀಕ್ಷೆ ಬರೆಯುವಂತೆ ಅಧಿಕಾರಿಗಳು ಮನವಿ ಮಾಡಿದ್ದಾರೆ.

## ಟೆಂಡರ್ ಆಹ್ವಾನ

ತುಮಕೂರು: ಕುಣಿಗಲ್ ನ್ಯಾಯಾಲಯ ಸಂಕೀರ್ಣ ಕಟ್ಟಡದ ಆವರಣದಲ್ಲಿ ಕ್ಯಾಂಟೀನ್ ನಡೆಸಲು ಪ್ರತಿಷ್ಠಿತ ಏಜೆನ್ಸಿಗಳಿಂದ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ಸ್ವೀಕರಿಸಿದ ವ್ಯಕ್ತಿಗಳು ಕುಣಿಗಲ್‌ನಲ್ಲಿರುವ ನ್ಯಾಯಾಲಯ ಸಂಕೀರ್ಣ ಕಟ್ಟಡದ ಆವರಣದಲ್ಲಿ ತಮ್ಮ ಸ್ವಂತ ವೆಚ್ಚದಲ್ಲಿ ತಾತ್ಕಾಲಿಕ ಕ್ಯಾಂಟೀನ್ ಅನ್ನು ನಡೆಸಬೇಕು. ಅನುಮೋದಿತ ಗುತ್ತಿಗೆಯು 3 ವರ್ಷಗಳವರೆಗೆ ಜಾರಿಯಲ್ಲಿರುತ್ತದೆ.

ಆಸಕ್ತ ಏಜೆನ್ಸಿಗಳು ಮೊಹರು ಮಾಡಿದ ಟೆಂಡರನ್ನು ಮಾರ್ಚ್ 17ರೊಳಗಾಗಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ತುಮಕೂರು ಇವರಿಗೆ ಸಲ್ಲಿಸಬೇಕು. ಟೆಂಡರ್ ಸಲ್ಲಿಸಿದ ಎಲ್ಲಾ ವ್ಯಕ್ತಿಗಳು ಮಾರ್ಚ್ 17ರ ಸಂಜೆ 5 ಗಂಟೆಗೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಮುಂದೆ ಹಾಜರಿರಬೇಕು. ಟೆಂಡರ್‌ದಾರರ ಸಮ್ಮುಖದಲ್ಲಿ ಟೆಂಡರ್ ತೆರೆಯಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

## ಮಾ 8 ರಿಂದ ಬೇವಿನಹಳ್ಳಿ ಕರಿಯಮ್ಮದೇವಿ ನೂತನ ವಿಗ್ರಹ ಪ್ರತಿಷ್ಠಾಪನಾ ಮಹೋತ್ಸವ

ಹುಳಿಯಾರು: ಹುಳಿಯಾರು ಹೋಬಳಿಯ ಮರಾಠಿಪಾಳ್ಯ ಯಳನಾಡು ಗ್ರಾಮದಲ್ಲಿ ಶ್ರೀ ಬೇವಿನಹಳ್ಳಿ ಕರಿಯಮ್ಮದೇವಿಯ ನೂತನ ವಿಗ್ರಹ ಪ್ರತಿಷ್ಠಾಪನಾ ಮಹೋತ್ಸವವನ್ನು ಮಾ.8 ರ ಭಾನುವಾರದಿಂದ ಮಾ. 10 ಮಂಗಳವಾರದವರೆಗೆ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ.

ಮಾ.8 ರ ಭಾನುವಾರ ಸಂಜೆ 6:30 ಕ್ಕೆ ಗೋಧೂಳಿ ಲಗ್ನದಲ್ಲಿ ಚಂಡಿಕಾ ಹೋಮ ಮತ್ತು ನಿಧಿಕುಂಭ ಸ್ಥಾಪನೆ ನೆರವೇರಲಿದೆ. ಮಾ.9 ರ ಸೋಮವಾರ ಬೆಳಿಗ್ಗೆ ಪುಣ್ಯಾಹ, ವಾಸ್ತು ಹೋಮ ಮತ್ತು ದಿಕ್ಬಲಿ ಕಾರ್ಯಕ್ರಮಗಳು ನಡೆಯಲಿವೆ. ಸಂಜೆ ಗುಂಗರಬಾಗಿ ಶ್ರೀ ರಾಮದೇವರು, ಶ್ರೀರಾಂಪುರದ ಶ್ರೀ ದುರ್ಗಮ್ಮದೇವಿ, ಮಾರಗೊಂಡನಹಳ್ಳಿಯ ಶ್ರೀ ಕರಿಯಮ್ಮ, ಬರಕನಹಾಲ್ ಶ್ರೀ ಹಟ್ಟಿಲಕ್ಕಮ್ಮದೇವಿ, ಪಂಚನಹಳ್ಳಿ ಶ್ರೀ ದುರ್ಗಾಪರಮೇಶ್ವರಿದೇವಿ ಹಾಗೂ ಮರಾಠಿಪಾಳ್ಯದ ಶ್ರೀ ಅಂಜನೇಯಸ್ವಾಮಿ ದೇವರುಗಳ ಆಗಮನ ಮತ್ತು ಕೂಡುಭೇಟಿ ಜರುಗಲಿದೆ. ರಾತ್ರಿ 8:30 ಕ್ಕೆ ಸಂಗೀತ ರಸಮಂಜರಿ ಕಾರ್ಯಕ್ರಮ ನಡೆಯಲಿದೆ.

ಸಂಜೆ 7:30 ಕ್ಕೆ ಧಾರ್ಮಿಕ ಸಮಾರಂಭ ಜರುಗಲಿದ್ದು, ಶ್ರೀ ಬಸವಮೂರ್ತಿ ಮಾದರ ಚನ್ನಯ್ಯ ಮಹಾಸ್ವಾಮಿಗಳು (ಚಿತ್ರದುರ್ಗ ಮಠ), ಶ್ರೀ ಷಡಾಕ್ಷರಿಮುನಿ ಮಹಾಸ್ವಾಮಿಗಳು (ಕೋಡಿಹಳ್ಳಿ ಬೃಹನ್ಮಠ, ಹಿರಿಯೂರು), ಶ್ರೀ ಈಶ್ವರನಂದಾಪುರಿ ಮಹಾಸ್ವಾಮಿಗಳು (ಕನಕ ಗುರುಪೀಠ, ಹೊಸದುರ್ಗ), ಶ್ರೀ ಜ್ಞಾನಪ್ರಭು ಸಿದ್ದರಾಮದೇಶಿಕೇಂದ್ರ ಮಹಾಸ್ವಾಮಿಗಳು (ಅರಸೀಕೆರೆ–ಯಳನಾಡು ಮಹಾಸಂಸ್ಥಾನ ಮಠ) ಹಾಗೂ ಶ್ರೀ ಕುಂಚಿಟಿಗರ ಮಹಾಸ್ವಾಮಿಗಳು (ಹೊಸದುರ್ಗ) ಅವರ ದಿವ್ಯ ಸಾನ್ನಿಧ್ಯದಲ್ಲಿ ಸಮಾರಂಭ ನಡೆಯಲಿದೆ. ಶಾಸಕ ಸಿ.ಬಿ.ಸುರೇಶ್ ಬಾಬು ಅವರು ಅಧ್ಯಕ್ಷತೆ ವಹಿಸಲಿದ್ದು, ಮಾಜಿ ಶಾಸಕ ಕೆ.ಎಸ್. ಕಿರಣ್‌ಕುಮಾರ್ ಉದ್ಘಾಟನೆ ನೆರವೇರಿಸಲಿದ್ದಾರೆ.

ಮಾ.10 ಮಂಗಳವಾರ ಬ್ರಾಹ್ಮೀ ಮುಹೂರ್ತದಲ್ಲಿ ಗಂಗಾಪೂಜೆ, ಕಳಸ ಅವಾಹನೆ, 101 ಕುಂಭಪೂಜೆ, ನೂತನ ವಿಗ್ರಹ ಪ್ರತಿಷ್ಠಾಪನೆ, ಬಿಂಬಸ್ಥಾಪನೆ, ದೃಷ್ಟಿಪೂಜೆ, ಅಭಿಷೇಕ ಮತ್ತು ಮಹಾಮಂಗಳಾರತಿ ನಡೆಯಲಿದ್ದು, ನಂತರ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ. ಸಂಜೆ 8:30 ಕ್ಕೆ ಆರ್ಕೆಸ್ಟ್ರಾ ರಸಮಂಜರಿ ಕಾರ್ಯಕ್ರಮ ಜರುಗಲಿದೆ.

ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸಿ ಶ್ರೀ ದೇವಿಯ ಕೃಪೆಗೆ ಪಾತ್ರರಾಗುವಂತೆ ದೇವಸ್ಥಾನ ಸಮಿತಿಯವರು ಕೋರಿದ್ದಾರೆ.

## ವೈಜ್ಞಾನಿಕ ಕನಿಷ್ಠ ವೇತನ ಜಾರಿಗೊಳಿಸುವಂತೆ ಆಗ್ರಹ

ತುಮಕೂರು:ಕನಿಷ್ಠ ವೇತನ ಎಂಬುದು ದಾನವಲ್ಲ ಅದು ಕಾರ್ಮಿಕರ ಶ್ರಮದ ಘನತೆಯನ್ನು ಕಾಪಾಡುವ ಸಂವಿಧಾನಿಕ. ಹಕ್ಕು 1992ರಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯ ಐತಿಹಾಸಿಕವಾದ ರೆಪ್ಟಾ ಕೋಸ್ ಬ್ರೆಟ್ ತೀರ್ಪಿನಲ್ಲಿ ಕನಿಷ್ಠ ವೇತನವು ಬದುಕಲು ಪೂರಕವಾದ ವೇತನ ಆಗಿರಬೇಕು ಎಂದು




ಮಹತ್ವದ ತೀರ್ಪು ನೀಡಿದೆ ಎಂದು ಎಟಿಯುಸಿ ಜಿಲ್ಲಾಧ್ಯಕ್ಷ ಕಂಬೇಗೌಡ ತಿಳಿಸಿದರು ಅವರು ಇಂದು ಕನಿಷ್ಠ ವೇತನ ಪರಿಷ್ಕರಣೆಯ ಅಂತಿಮ ಅಧಿಸೂಚನೆ ಹೊರಡಿಸುವಂತೆ ಹಾಗೂ ವೈಜ್ಞಾನಿಕ ಕನಿಷ್ಠ ವೇತನ ಜಾರಿಗೊಳಿಸುವಂತೆ ಆಗ್ರಹಿಸಿ ಎಐಟಿಯುಸಿ ಜಿಲ್ಲಾ ಮಂಡಳಿ ವತಿಯಿಂದ ಕಾರ್ಮಿಕ ಇಲಾಖೆಯ ಎದುರು ಹಮ್ಮಿಕೊಂಡಿದ್ದ ಪ್ರತಿಭನೆಯನ್ನು ಉದ್ದೇಶಿಸಿ ಮಾತನಾಡಿದರು. ಒಂದು ಕುಟುಂಬದಲ್ಲಿ ಮನುಷ್ಯ ಬದುಕು ನಡೆಸಲು ಅವಶ್ಯಕವಾದ ಆಹಾರ, ಉಡುಪು, ವಸತಿ ಶಿಕ್ಷಣ. ಆರೋಗ್ಯ ಇತ್ಯಾದಿಗಳಿಗೆ ಅಗತ್ಯವಾದಷ್ಟು ವೇತನ ದೊರಕಬೇಕೆಂದು ವೈಜ್ಞಾನಿಕವಾದ ಮಾರ್ಗಸೂಚಿಗಳನ್ನು ನೀಡಿದೆ ದುಡಿಯುವ ಪ್ರತಿಯೊಬ್ಬ ವ್ಯಕ್ತಿಗೆ 2700 ಕ್ಯಾಲೋರಿ ಪೌಷ್ಟಿಕಾಂಶ ವರ್ಷಕ್ಕೆ ಇಡೀ ಕುಟುಂಬಕ್ಕೆ 72ಗಜ ಬಟ್ಟೆ, ಮನೆಬಾಡಿಗೆ, ಇದೆಲ್ಲದೆ ಇಂಧನ ಮತ್ತು ಬೆಳಕಿನ ವ್ಯವಸ್ಥೆಗಾಗಿ ಶೇ.20ರಷ್ಟು ಹಾಗೂ ಮಕ್ಕಳ ಶಿಕ್ಷಣ ವೈದ್ಯಕೀಯ ಅವಶ್ಯಕತೆಗಳಿಗಾಗಿ ಶೇ.25ರಷ್ಟು ಸಂಭಾವನೆಯೂ ಕನಿಷ್ಟ ವೇತನದಲ್ಲಿ ಒಳಗೊಂಡಿರಬೇಕೆಂದು ನ್ಯಾಯಾಲಯವು ಸೂಚಿಸಿದೆ

ಈ ಪ್ರಮಾಣದ ವೇತನವನ್ನು ನೀಡಭಾಗದ ಯಾವುದೇ ಉದ್ಯಮವೂ ಅಸ್ತಿತ್ವದಲ್ಲಿರುವ ಹಕ್ಕು ಇಲ್ಲವೆಂದು ಸ್ಪಷ್ಟಪಡಿಸಿದೆ.

ಹೆಚ್ಚಿನ ವೇತನವು ಉದ್ಯೋಗ ಸದ್ದಕ್ಕೆ ಕಾರಣವಾಗುತ್ತದೆ ಎಂಬದಾದವು ನೋಬೆಲ್ ಪ್ರಶಸ್ತಿ ವಿಜೇತ ಡೇವಿಡ್ ಕಾರ್ಡ್ ರವರು ಸುಳ್ಳೆಂದು ಪ್ರತಿಪಾದಿಸಿದ್ದಾರೆ.

ಕನಿಷ್ಠ ವೇತನವನ್ನು ಹೆಚ್ಚಿಸುವುದು ಉದ್ಯೋಗ ಕಡಿಮೆ ಮಾಡುವುದಿಲ್ಲ ಬದಲಾಗಿ ಇದು ಆರ್ಥಿಕ ಬೆಳವಣಿಗೆಯ "ಸದ್ಗುಣಶೀಲ"ವನ್ನು ಸೃಷ್ಟಿಸುತ್ತದೆ ಎಂದು ಅವರ ಸಂಶೋಧನೆಯು ಧೃಡರಡಿಸಿದೆ.

ಇಂದು ನಮ್ಮ ಆರ್ಥಿಕತೆಯ ಒಟ್ಟು ಬೇಡಿಕೆಯ ಅಕ್ಕಟ್ಟನಿಂದ ಬಳಲುತ್ತಿದೆ. ಕರ್ನಾಟಕ ರಾಜ್ಯದ 177 ಕಾರ್ಮಿಕರ ಖರೀದಿ ಸಾಮರ್ಥ್ಯವನ್ನು ಹೆಚ್ಚಿಸುವ ಮೂಲಕ ಮಾರುಕಟ್ಟೆಗೆ ಹಣದ ಹರಿವನ್ನು ಉಂಟುಮಾಡುವ ಬಗ್ಗೆ ಗಮನಹರಿಸಬೇಕಾಗಿದೆ. ಒಬ್ಬ ಕಾರ್ಮಿಕರು ಹೆಚ್ಚು ಸಂಪಾದಿಸಿದಾಗ ಅವನು ಸ್ಥಳೀಯ ವಸ್ತುಗಳ ಮೇಲೆ ಹೆಚ್ಚು ಖರ್ಚು ಮಾಡುತ್ತಾನೆ. ಇದು ಕೈಗಾರಿಕಾ ಉತ್ಪಾದನೆಯನ್ನು ಮನಗತನಗೋಳಿಸುತ್ತದೆ ಮಾತ್ರವಲ್ಲದೆ. ಆರ್ಥಿಕ ಚಲನಶೀಲತೆಯನ್ನು ಹೆಚ್ಚಿಸುತ್ತದೆ. ಈ ದಿಸೆಯಲ್ಲಿ ಕನಿಷ್ಠ ವೇತನ ಪರಿಷ್ಕರಣೆಯು ಕರ್ನಾಟಕದ ಇತಿಹಾದಲ್ಲಿ ಕಾರ್ಮಿಕ ವರ್ಗಕ್ಕೆ ಸಂಬಂದಿಸಿದ ಅತಿದೊಡ್ಡ ಆರ್ಥಿಕ ಸುಧಾರಣಾ ಕ್ರಮವಾಗಿರುತ್ತದೆ ಎಂದರು

ಎಐಟಿಯುಸಿ ಕಾರ್ಯಾಧ್ಯಕ್ಷ ಗಿರೀಶ್ ಮಾತನಾಡಿ ತುಮಕೂರಿನ ಹೈಟೆಕ್ ಆಟೋಮೊಬೈಲ್ ಕಾರ್ಖಾನೆ ಕಾರ್ಮಿಕರಿಂದ ಹಿಡಿದು ಗ್ರಾಮೀಣ ತಾಲ್ಲೋಕುಗಳ ಗುಡಿ ಕೈಗಾರಿಕೆ ಆಧಾರಿತ ಅಗರಬತ್ತಿ ಬೀಡಿ ಕಾರ್ಮಿಕರವರೆಗೆ ಹಾಗೂ ಸ್ವಿಗ್ಗಿ ರೋಮ್ಯಾಟೊದಂತಹ ಗಿಗ್–ಎಕನಾಮಿ ಡೆಲವರಿ ಪಾರ್ಟ್ನರ್ ಗಳಿಂದ ಕನಿಷ್ಠವೇತನ ಪರಿಷ್ಠರಣೆಯ ಮೂಲಕ1.77ಕೋಟಿಗೂ ಹೆಚ್ಚು ಕುಟುಂಬಗಳು ಘನತೆ ಮತ್ತು ಗೌರವಯುತಜೀವನ ನಡೆಸಲು ಸಹಕಾರಿಯಾಗಲಿದೆ. ಕಾರ್ಮಿಕ ಕಾನೂನುಗಳ ಪ್ರಕಾರ ಪ್ರತಿ ಐದು ವರ್ಷಕ್ಕೊಮ್ಮೆ ವೇತನ ಪರಿಷ್ಕರಣೆ ಕಡ್ಡಾಯವಾಗಿದ್ದು ರಾಜ್ಯ ಸರ್ಕಾರ ತನ್ನ ಶಾಸನಬದ್ಧ ಕರ್ತವ್ಯವನ್ನು ನಿಭಾಯಿಸುವಲ್ಲಿ ವಿಫಲವಾಗಿದೆ. ಕಳೆದ 9 ವರ್ಷಗಳಿಂದ ವೇತನ ಪರಿಷ್ಕರಣೆ ಮಾಡದೇ ವಿಳಂಬ ನೀತಿ ಅನುಸರಿಸುತ್ತಿರುವುದು ಸಂವಿಧಾನದ ವಿಧಿ 23ರ ಅಡಿಯಲ್ಲಿ ಒಬ್ಬ ಕಾರ್ಮಿಕನಿಗೆ ದೊರೆಯಬೇಕಾದ ಮೂಲಭೂತ ಹಕ್ಕುಗಳ ನಿರಾಕರಣೆ ಮಾಡಿದಂತಾಗುತ್ತದೆ. ಪ್ರಸ್ತುತ ಸಂದರ್ಭದಲ್ಲಿ ಜೀವನಾವಶ್ಯಕ ಅಕ್ಕಿ ಬೇಳೆ ಕಾಳು ಎಣ್ಣೆ ತರಕಾರಿ ಬೆಲೆಗಳು ಶಿಕ್ಷಣ, ಆರೋಗ್ಯ ಸೇವೆಗಳ ಬೆಲೆ, ವಿಪರೀತವಾಗಿ ಏರುತ್ತಿದ್ದರೂ ಸಹ ದುಡಿಯುವ ಜನರ ವೇತನ ಮಾತ್ರ ಹೆಚ್ಚಾಗದೆ ಕಡಿಮೆ ವೇತನ ಪಡೆದು ಬಡತನದ ಬದುಕು ಸಾಗಿಸುವಂತಹದಾಗಿದೆ. ಆದ್ದರಿಂದ ನಮ್ಮ ಕೆಳಕಂಡ ಬೇಡಿಕೆಗಳನ್ನು ಸರ್ಕಾರ ಕೂಡಲೇ ಈಡೇರಿಸಬೇಕೆಂದು ಒತ್ತಾಯಿಸಿದರು.

ಎಐಟಿಯುಸಿ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್‌ಜಿ ಮಾತನಾಡಿ ಏಪ್ರಿಲ್ 11.2025ರ ರ ಕರಡು ಕನಿಷ್ಟ ಕೂಲಿ ಅಧಿಸೂಚನೆಯನ್ನು ಕೂಡಲೇ ಅಂತಿಮ ಅಧಿಸೂಚನೆಯಾಗಿ ಪ್ರಕಟಿಸಿ, ಮೂರು ವರ್ಷಗಳ ವಿಳಂಭವನ್ನು ಸರಿದೂಗಿಸಲು ಪರಿಷ್ಕರಣೆಯು 2022ರಿಂದ ಜಾರಿಗೆ ಬರುವಂತೆ ಪೂರ್ವಾನ್ವಯವಾಗಿ ಹಾರಿಗೊಳಿಸಿ, ತುಟ್ಟಿಭತ್ಯೆ ದರವನ್ನು ಪ್ರತಿ ಸೂಚ್ಯಂಕ ಪಾಯಿಂಟ್ 8 ಪೈಸೆ ಹೆಚ್ಚಿಸಬೇಕು, ಸುಪ್ರೀಂ ಕೋರ್ಟ್ ಮಾನದಂಡ ಪ್ರಕಾರ ಕ್ಯಾಲೋರಿ ಸೇವನೆಯನ್ನು ಪ್ರಸ್ತಾವಿಕ 23214 ಕ್ಯಾಲೋರಿಗಳ ಬದಲಿಗೆ 2700 ಕ್ಯಾಲೋರಿಗಳಿಗೆ ಹೆಚ್ಚಿಸಬೇಕು, ಗಾರ್ಮೆಂಟ್ಸ್, ಬೀಡಿ, ಅಗರಬತ್ತಿ ಮತ್ತು ಪ್ಲಾಂಟೇಷನ್ ವಲಯಗಳಲ್ಲಿ ಮಹಿಳೆಯರು ಎದುರಿಸುತ್ತಿರುವ ಶೇಕಡ 40 ವೇತನ ಅಸಮಾನತೆಯನ್ನು ಏಕರೂಪದ ಅಧಿಸೂಚನೆಯ ಮೂಲಕ ಷೆಡ್ಯೂಲ್‌ವಾರು ತಾರತಮ್ಯವನ್ನು ಅಂತ್ಯಗೊಳಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಖಜಾಂಚಿ ರವಿಪ್ರಸಾದ್ ಸಿ.ಎ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

## ಫುಟ್‌ಪಾತ್ ಮೇಲಿದ ಗೂಡಂಗಡಿಗಳ ತೆರವು ಮಾಡಿ



ಹುಳಿಯಾರು: ಪಟ್ಟಣದ ಬೀದಿ ಬದಿ ವ್ಯಾಪಾರಿಗಳು ಫುಟ್‌ಪಾತ್ ಮೇಲೆ ವ್ಯಾಪಾರ ಮಾಡುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಫುಟ್ಪಾತ್ ಮೇಲೆ ಸಾರ್ವಜನಿಕರಿಗೆ ಅಡ್ಡಿ ಮಾಡಿಕೊಂಡು ವ್ಯಾಪಾರ ನಡೆಸುತ್ತಿರುವ ವ್ಯಾಪಾರಿಗಳ ತೆರವು, ಪಟ್ಟಣ ಪಂಚಾಯಿತಿಯಲ್ಲಿನ ಸಿಬ್ಬಂದಿ ಕೊರತೆ ನೀಗಿಸುವುದು ಹಾಗೂ ಪ್ಲಾಸ್ಟಿಕ್ ಮುಕ್ತ ನಗರ ನಿರ್ಮಾಣ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಹುಳಿಯಾರು ನಾಗರಿಕ ಹಿತರಕ್ಷಣಾ ವೇದಿಕೆ'ಯಿಂದ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಫುಟ್‌ಪಾತ್ ತೆರವಿಗೆ ಆಗ್ರಹ : ಪಟ್ಟಣದ ಬಸ್ ನಿಲ್ದಾಣ ಸೇರಿದಂತೆ ಮುಖ್ಯ ರಸ್ತೆಗಳ ಫುಟ್‌ಪಾತ್‌ಗಳ ಮೇಲೆ ವ್ಯಾಪಾರ ವಹಿವಾಟು ನಡೆಯುತ್ತಿರುವುದರಿಂದ ಸಾರ್ವಜನಿಕರ ಸಂಚಾರಕ್ಕೆ ತೀವ್ರ ಅಡಚಣೆಯಾಗುತ್ತಿದೆ. ಅಲ್ಲದೆ, ವ್ಯಾಪಾರಿಗಳು ಎಲ್ಲೆಂದರಲ್ಲಿ ಕಸ ಎಸೆಯುತ್ತಿರುವುದರಿಂದ ಅಶುಚಿತ್ವ ನಿರ್ಮಾಣವಾಗುತ್ತಿದೆ. ಆದ್ದರಿಂದ ಬೀದಿ ಬದಿ ವ್ಯಾಪಾರಿಗಳಿಗೆ ಪ್ರತ್ಯೇಕ ಸ್ಥಳ ನಿಗದಿಪಡಿಸಿ, ಫುಟ್‌ಪಾತ್‌ಗಳನ್ನು ತಕ್ಷಣವೇ ತೆರವುಗೊಳಿಸಬೇಕು ಎಂದು ವೇದಿಕೆ ಒತ್ತಾಯಿಸಿತು.

ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಾಧಿಕಾರಿಗಳು, "ಶೀಘ್ರದಲ್ಲೇ ವ್ಯಾಪಾರಿಗಳ ಸಭೆ ಕರೆದು ತಿಳುವಳಿಕೆ ನೀಡಲಾಗುವುದು ಹಾಗೂ ಸಾರ್ವಜನಿಕರಿಗೆ ತೊಂದರೆಯಾಗದಂತೆ ಪರ್ಯಾಯ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು" ಎಂದರು.

ಸಿಬ್ಬಂದಿ ನೇಮಕ ಮತ್ತು ಸ್ವಚ್ಛತೆ : ಕಳೆದ ಹಲವು ವರ್ಷಗಳಿಂದ ಪಟ್ಟಣ ಪಂಚಾಯಿತಿಯಲ್ಲಿ ಅಗತ್ಯ ಸಿಬ್ಬಂದಿ ಮತ್ತು ಪೌರಕಾರ್ಮಿಕರ ಕೊರತೆ ಇರುವುದರಿಂದ ಆಡಳಿತಾತ್ಮಕ ಕೆಲಸಗಳು ಹಾಗೂ ಸ್ವಚ್ಛತಾ ಕಾರ್ಯ ಕುಂಠಿತಗೊಂಡಿದೆ. ಚರಂಡಿಗಳಲ್ಲಿ ನೀರು ನಿಂತು ರೋಗರುಜಿನಗಳು ಹರಡುವ ಭೀತಿ ಎದುರಾಗಿದೆ. ಕೂಡಲೇ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿ ಪಟ್ಟಣದಾದ್ಯಂತ ಸ್ವಚ್ಛತೆ ಕಾಪಾಡಬೇಕು ಎಂದು ನಿಯೋಗ ಮನವಿ ಮಾಡಿತು. ಈ ಬಗ್ಗೆ ಮಾತನಾಡಿದ ಮುಖ್ಯಾಧಿಕಾರಿಗಳು, ಸಿಬ್ಬಂದಿ ನೇಮಕಾತಿ ಪ್ರಕ್ರಿಯೆ ಈಗಾಗಲೇ ಚಾಲನೆಯಲ್ಲಿದೆ ಎಂದು ಭರವಸೆ ನೀಡಿದರು.

ಪ್ಲಾಸ್ಟಿಕ್ ಮುಕ್ತ ಹುಳಿಯಾರು : ಪಟ್ಟಣದಲ್ಲಿ 40 ಮೈಕ್ರಾನ್‌ಗಿಂತ ಕಡಿಮೆ ಇರುವ ಪ್ಲಾಸ್ಟಿಕ್ ಬಳಕೆ ಹೆಚ್ಚಾಗುತ್ತಿದ್ದು, ಇದರಿಂದ ಪರಿಸರ ಮಾಲಿನ್ಯ ಉಂಟಾಗುತ್ತಿದೆ. ಹೋಟೆಲ್ ಮಾಲೀಕರು, ವ್ಯಾಪಾರಿಗಳು ಹಾಗೂ ಸಂಜೀವಿನಿ ಮಹಿಳಾ ಸಂಘಗಳ ಸಭೆ ನಡೆಸಿ ಪ್ಲಾಸ್ಟಿಕ್ ಬದಲಿ ವಸ್ತುಗಳ ಬಳಕೆಗೆ ಜಾಗೃತಿ ಮೂಡಿಸಬೇಕು ಎಂದು ವೇದಿಕೆ ಆಗ್ರಹಿಸಿತು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಾಧಿಕಾರಿಗಳು ಪಟ್ಟಣದಲ್ಲಿ ನಿಷೇಧಿತ ಪ್ಲಾಸ್ಟಿಕ್ ಬಳಕೆಯನ್ನು ತಡೆಯಲು ಈಗಾಗಲೇ ಕರಪತ್ರ ಹಂಚುವ ಮೂಲಕ ಅರಿವು ಮೂಡಿಸಲಾಗಿದ್ದು, ಹೋಟೆಲ್ ಮತ್ತು ಅಂಗಡಿ

ಮಾಲೀಕರಿಗೆ ಪ್ಲಾಸ್ಟಿಕ್ ಬಳಸದಂತೆ ಸೂಚನೆ ನೀಡಲಾಗಿದೆ. ಸಂತೆ ವ್ಯಾಪಾರಿಗಳಿಗೆ ಸಹ ಎಚ್ಚರಿಕೆ ನೀಡಲಾಗಿದ್ದು, ಕೆಲವೆಡೆ ದಾಳಿ ನಡೆಸಿ ಪ್ಲಾಸ್ಟಿಕ್ ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದರು. ಸಾರ್ವಜನಿಕರು ಮತ್ತು ಸಂಘ–ಸಂಸ್ಥೆಗಳು ಸಹಕರಿಸಿದರೆ ಮಾತ್ರ ಸಂಪೂರ್ಣ ಪ್ಲಾಸ್ಟಿಕ್ ನಿಷೇಧ ಸಾಧ್ಯ ಎಂದು ತಿಳಿಸಿದರು.

ಬಸ್ ನಿಲ್ದಾಣ, ಉಮಾ ಸ್ಟೋರ್ ಹಾಗೂ ಶಿಲ್ಪಾ ಸ್ಟೋರ್ ಮುಂಭಾಗದ ರಸ್ತೆಯಲ್ಲಿ ವಾಹನಗಳನ್ನು ಅಡ್ಡಾದಿಡ್ಡಿಯಾಗಿ ನಿಲ್ಲಿಸುವುದರಿಂದ ಸುಗಮ ಸಂಚಾರಕ್ಕೆ ಅಡಚಣೆ ಉಂಟಾಗುತ್ತಿದೆ. ಕೆರೆ ಅಂಗಳದಲ್ಲಿ ಸೂಕ್ತ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸುವ ಮೂಲಕ ಸಂಚಾರ ದಟ್ಟಣೆ ಸಮಸ್ಯೆ ನಿವಾರಣೆ ಮಾಡಬೇಕು ಎಂದು ದಲಿತ ಸಹಾಯವಾಣಿಯ ಹನುಮಂತಪ್ಪ ಇದೇ ಸಂದರ್ಭದಲ್ಲಿ ಒತ್ತಾಯಿಸಿದರು.

ಸಾರ್ವಜನಿಕ ಸಮಸ್ಯೆಗಳ ಪರಿಹಾರಕ್ಕಾಗಿ ಸಂಘ–ಸಂಸ್ಥೆಗಳು ಹಾಗೂ ಸಾರ್ವಜನಿಕರ ಸಹಕಾರ ಅಗತ್ಯವಿದೆ ಎಂದು ಮುಖ್ಯ ಅಧಿಕಾರಿ ಮಂಜುನಾಥ್ ತಿಳಿಸಿದ್ದು, ಶೀಘ್ರವೇ ಇದಕ್ಕೆಲ್ಲ ಪರಿಹಾರ ಸೂಚಿಸುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ವೇದಿಕೆಯ ಪ್ರಮುಖರಾದ ರಾಮಕೃಷ್ಣಪ್ಪ, ಎನ್. ಇಂದಿರಮ್ಮ, ಜಯಲಕ್ಷ್ಮಮ್ಮ, ಮಮತಾ ನಟರಾಜ್, ನಂದಾವಾಡಗಿ ದಲಿತ ಸಹಾಯವಾಣಿಯ ಹನುಮಂತಪ್ಪ, ಕಾಮನಬಿಲ್ಲು ಫೌಂಡೇಶನ್‌ನ ಚನ್ನಕೇಶವ, ಶಂಕರೇಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಕಾಲಜ್ಞಾನಿ ಯೋಗಿ ನಾರೇಯಣ ಯತೀಂದ್ರ ಜಯಂತಿ ಆಚರಣೆ



ಹುಳಿಯಾರು: ಪಟ್ಟಣದ ಬಲಿಜ ಸಮುದಾಯ ಭವನದಲ್ಲಿ ಕಾಲಜ್ಞಾನಿ ಶ್ರೀ ಯೋಗಿ ನಾರೇಯಣ ಯತೀಂದ್ರರ (ಕೈವಾರ ತಾತಯ್ಯ) ಜಯಂತಿಯನ್ನು ಅತ್ಯಂತ ಭಕ್ತಿ ಪೂರ್ವಕವಾಗಿ ಆಚರಿಸಲಾಯಿತು.

ಸಮಾಜದ ಏಳಿಗೆಗೆ ತಾತಯ್ಯನವರ ಕೊಡುಗೆ ಅನನ್ಯ:

ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಹುಳಿಯಾರು ಹೋಬಳಿ ಬಲಿಜ ಸಂಘದ ಅಧ್ಯಕ್ಷರಾದ ಎಚ್. ಕೆ. ರಾಮಯ್ಯ, ಯೋಗಿ ನಾರಾಯಣ ಅವರ ಇಡೀ ಬದುಕು ಸಮಾಜದ ಉದ್ದಾರಕ್ಕಾಗಿಯೇ ಮುಡಿಪಾಗಿತ್ತು. ಅವರು ದಶಕಗಳ ಹಿಂದೆಯೇ ಕಾಲಜ್ಞಾನದಲ್ಲಿ ನುಡಿದಿದ್ದ ಮಾತುಗಳು ಇಂದು ಅಕ್ಷರಶಃ ಸತ್ಯವಾಗುತ್ತಿವೆ. ತಾತಯ್ಯನವರು ಕೇವಲ ಒಬ್ಬ ಯೋಗಿಯಷ್ಟೇ ಅಲ್ಲದೆ, ಮಹಾನ್ ಕವಿಯಾಗಿ, ಸಮಾಜಮುಖಿ ಚಿಂತಕರಾಗಿ ಮತ್ತು ಸಾಮಾಜಿಕ ಪಿಡುಗುಗಳನ್ನು ತೊಡೆದುಹಾಕಿದ ಹರಿಕಾರರಾಗಿ ಬದುಕಿನ ಸಾರ್ಥಕತೆ ಕಂಡಿದ್ದಾರೆ. ಅವರ ಆದರ್ಶಗಳು ಮತ್ತು ತತ್ವಗಳು ನಮ್ಮೆಲ್ಲರ ಬದುಕಿಗೆ ದಾರಿದೀಪವಾಗಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಹುಳಿಯಾರು ಪಟ್ಟಣ ಪಂಚಾಯಿತಿ ಅಧ್ಯಕ್ಷರಾದ ಪ್ರೀತಿ ರಾಘವೇಂದ್ರ, ಬಲಿಜ ಸಂಘದ ಅಧ್ಯಕ್ಷ ಹೂವಿನ ಬಸವರಾಜು, ಅಮರನಾರಾಯಣ ಎಜುಕೇಶನ್ ಟ್ರಸ್ಟಿನ ಕಾರ್ಯದರ್ಶಿ ಕೆ.ಎಂ. ರಾಮಯ್ಯ, ಪಟ್ಟಣ ಪಂಚಾಯಿತಿ ಮಾಜಿ ಸದಸ್ಯ ರಾಘವೇಂದ್ರ, ಪ್ರಮುಖರಾದ ಕೆ.ಎಂ.ಎಲ್. ನರಸಿಂಹಮೂರ್ತಿ, ಶಂಕ್ರಪ್ಪ, ದಬ್ಬಗುಂಟೆ ರಂಗನಾಥಪ್ಪ, ಪಾತ್ರೆ ಸತೀಶ್, ತಿಮ್ಲಾಪುರ ರಾಜಣ್ಣ, ಹೇಮಂತ್, ವೆಂಕಟಮ್ಮ, ಗಂಗಮ್ಮ, ದ್ರಾಕ್ಷಾಯಿಣಿ ಸೇರಿದಂತೆ ಹೋಬಳಿಯ ಬಲಿಜ ಸಮುದಾಯದ ಮುಖಂಡರು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

# ಪಪಂ ವಾಣಿಜ್ಯ ಮಳಿಗೆಯ ಅಂಡರ್ ಗ್ರೌಂಡ್‌ನಲ್ಲಿ ಚರಂಡಿ ನೀರು ನಿಂತು ದುರ್ನಾತ

## ವ್ಯಾಪಾರ ಮಾಡಲಾಗದೆ ಪಂಚಾಯ್ತಿಗೆ ಹಿಡಿಶಾಪ ಹಾಕುತ್ತಿರುವ ವ್ಯಾಪಾರಿಗಳು



ಹುಳಿಯಾರು: ಹುಳಿಯಾರು ಪಟ್ಟಣ ಪಂಚಾಯ್ತಿಯ ವಾಣಿಜ್ಯ ಮಳಿಗೆಗಳ ಅಂಡ್‌ಗ್ರೌಂಡ್‌ನಲ್ಲಿ ಕೊಳಚೆ ನೀರು ನಿಂತು ದುರ್ನಾತ ಬೀರುತ್ತಿದೆ. ಕಳೆದ ಮೂರ್‍ನಲ್ಕು ತಿಂಗಳುಗಳಿಂದ ಈ ಸಮಸ್ಯೆ ಇದ್ದರೂ ಸಹ ಪಂಚಾಯ್ತಿ ಸರಿಪಡಿಸದೆ ನಿರ್ಲಕ್ಷ್ಯಿಸಿದೆ. ಪರಿಣಾಮ ಸೊಳ್ಳೆಗಳಿಂದ ಕಚ್ಚಿಸಿಕೊಂಡು, ದರ್ನಾತ ಸೇವಿಸುವ ವ್ಯಾಪಾರ ಮಾಡುವ ಅನಿವಾರ್ಯ ಕರ್ಮ ಇಲ್ಲಿನ ಅಂಗಡಿಯವರದಾಗಿದೆ.

ಹೌದು, ಹುಳಿಯಾರು ಬಸ್ ನಿಲ್ದಾಣದಲ್ಲಿ ಪಂಚಾಯ್ತಿಯಿಂದ ಐವತ್ತಕ್ಕೂ ಹೆಚ್ಚು ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿ ಬಾಡಿಗೆ ನೀಡಲಾಗಿದೆ. ಈ ಮಳಿಗೆಗಳ ಪೈಕಿ ಆಸ್ಪತ್ರೆ ಕಾಂಪೌಂಡ್‌ಗೆ ಹೊಂದಿಕೊಂಡಂತೆ ಇಪ್ಪತ್ತಕ್ಕೂ ಹೆಚ್ಚು ಮಳಿಗೆಗಳನ್ನು ನಿರ್ಮಿಸಿದ್ದಾರೆ. ಈ ಮಳಿಗೆಯ ಗ್ರೌಂಡ್ ಫ್ಲೋರ್‌ನಲ್ಲಿ ಸಂಗ್ರಹವಾಗುವ ಮಳೆ ನೀರು ಸರಾಗವಾಗಿ ಹರಿದುಹೋಗಲು ಪೈಪ್ ಅಳವಡಿಸಲಾಗಿತ್ತು. ಆದರೆ ಈ ಪೈಪ್‌ಗೆ ಅಡ್ಡಲಾಗಿ ಹುಳಿಯಾರು ಕೆರೆಯಲ್ಲಿ ಕಸ, ಮಣ್ಣು ಹಾಕಿದ್ದರಿಂದ ಪೈಪ್ ಕಟ್ಟಿಕೊಂಡು ನೀರು ಹೋಗದಂತಾಗಿರುವುದು ಸಮಸ್ಯೆಯ ಮೂಲ ಕಾರಣವಾಗಿದೆ.ಇದರ ಜೊತೆಗೆ ಬಸ್ ನಿಲ್ದಾಣದಲ್ಲಿ ಹೊಸ ಶೌಚಾಲಯ ನಿರ್ಮಿಸುವಾಗ ಇದೇ ಪೈಪ್ ಲೈನ್‌ಗೆ ಮಧ್ಯದಲ್ಲಿ ಲೆಟ್ರಿನ್ ಫಿಟ್ ಮಾಡಿದ್ದಾರೆ. ಈ ಸಂದರ್ಭದಲ್ಲಿ ಸ್ಥಳಿಯರು ಎಷ್ಟೇ ವಿರೋಧ ಮಾಡಿದರೂ ಸಹ ಕೇಳದೆ ಫಿಟ್ ಮಾಡಿ ಮುಗಿಸಿದ್ದಾರೆ. ಶೌಚಾಲಯ ಬಳಕೆಯಾದ ದಿನದಿಂದ ಶೌಚದ ನೀರು ಸಹ ಹಿಂಗಿ ಅಂಡರ್ ಗ್ರೌಂಡ್ ಮಳಿಗೆಗೆ ಬರುತ್ತಿದೆ. ಬಂದ ನೀರು ಪೈಪ್ ಮೂಲಕ ಹೋಗದೆ ಅಲ್ಲಿಯೇ ನಿಂದು ವ್ಯಾಪಾರ ಮಾಡಲಾಗದಷ್ಟು ದುರ್ವಾಸನೆ ಬೀರುತ್ತಿದೆ. ಅಲ್ಲಿದೆ ಸೊಳ್ಳೆಗಳು ಸೇರಿದಂತೆ ವಿಷಜಂತುಗಳ ಕಾಟ ಆರಂಭವಾಗಿದೆ. ಅಂಗಡಿ ಬಾಡಿಗೆದಾರರೇ ಆಗಾಗ ಹಣ ಹಾಕಿ ಜೆಸಿಬಿ ಮೂಲಕ ಪೈಪ್‌ಲೈನ್ ಕಂಠದಲ್ಲಿ ಕಟ್ಟಿಕೊಂಡಿರುವ ಕಸ ತೆಗೆಸುತ್ತಾರಾದರೂ ಶಾಶ್ವತ ಪರಿಹಾರದ ಅಗತ್ಯವಿದೆ. ಈ ಸಮಸ್ಯೆಯ ಬಗ್ಗೆ ಪಪಂ ಸದಸ್ಯರು, ಅಧಿಕಾರಿಗಳಿಗೆ ತಿಳಿಸಿದ್ದರೂ ಸಹ ಗಮನ ಹರಿಸದೆ ನಿರ್ಲಕ್ಷ್ಯಿಸಿದ್ದಾರೆ. ಪಂಚಾಯ್ತಿ ಅಧ್ಯಕ್ಷರಿಗೆ ಮೇಲಿಂದ ಮೇಲೆ ಒತ್ತಡ ಏರಿದ ಫಲವಾಗಿ ಈಗ ಬೇರೆಡೆ ಶೌಚಗುಂಡಿ ಮಾಡಿದ್ದಾರೆ. ಆದರೆ ಶೌಚಾಲಯದಿಂದ ಸಂಪರ್ಕ ಕೊಡದೆ ಮೀನಾಮೇಷ ನೋಡುತ್ತಿರುವುದರಿಂದ ಸಮಸ್ಯೆಗೆ ಇನ್ನೂ ಮುಕ್ತಿ ಸಿಕ್ಕಿಲ್ಲ. ಇನ್ನಾದರೂ ಹೊಸ ಶೌಚಗುಂಡಿಗೆ ಸಂಪರ್ಕ ಕೊಡುವ ಜೊತೆಗೆ ಅಂಡರ್ ಗ್ರೌಂಡ್‌ನಲ್ಲಿ ನಿಲ್ಲುವ ನೀರು ಸರಾಗವಾಗಿ ಹರಿಯುವಂತೆ ಮಾಡಿ ಸುಗಮವಾಗಿ ವ್ಯಾಪಾರ ವಹಿವಾಟು ನಡೆಸುಕೊಂಡು ಹೋಗುವಂತೆ ಮಾಡಲು ವ್ಯಾಪಾರಿಗಳು ಮನವಿ ಮಾಡಿದ್ದಾರೆ.

**ಮೆಟ್ಟಲಿನ ಮೇಲೆ ತರಕಾರಿ ಇಟ್ಟು ವ್ಯಾಪಾರ**

ಶೌಚಾಲಯದ ಪಕ್ಕದಲ್ಲೇ ನಮ್ಮ ತರಕಾರಿ ಮಳಿಗೆ ಇರುವುದರಿಂದ ಶೌಚದ ನೀರು ಮೊದಲು ನಮ್ಮ ಮಳಿಗೆಯಲ್ಲಿ ನಿಲ್ಲುತ್ತದೆ. ಹಾಗಾಗಿ ಮಳಿಗೆಯಲ್ಲೇ ಮರದ ಅಲಗೆಯಿಂದ ಎತ್ತರ ಮಾಡಿಕೊಂಡು ತರಕಾರಿ ಇಟ್ಟು ಮೆಟ್ಟಲಿನ ಮೇಲೆ ವ್ಯಾಪಾರ ಮಾಡುತ್ತಿದ್ದೇವೆ. ಆದರೂ ದರ್ನಾತ ಮತ್ತು ಸೊಳ್ಳೆಗೆ ಸುವಾಸಿತ ಊದುಬತ್ತಿ ಹಚ್ಚಿಕೊಂಡು ವ್ಯಾಪಾರ ಮಾಡುವಂತಾಗಿದೆ.

ಖಾಜಾ, ತರಕಾರಿ ವ್ಯಾಪಾರಿ, ಹುಳಿಯಾರು

**ರಿಪೇರಿ ಮಾಡಿಸಿ ಮಾಡಿಸಿ ಸಾಕಾಗಿ ಹೋಗಿದೆ**

ಅಂಡರ್ ಗ್ರೌಂಡ್ ನೀರು ಹರಿದು ಹೋಗುವ ಪೈಪ್‌ಗೆ ಅಡ್ಡಲಾಗಿ ಮಣ್ಣು, ಕಸ ತಂದು ಸುರಿಯುತ್ತಾರೆ. ಪರಿಣಾಮ ನೀರು ಹರಿಯದೆ ಮಳಿಗೆಗಳಲ್ಲಿ ನಿಲ್ಲುತ್ತದೆ. ಹೀಗೆ ನೀರು ನಿಂತಾಗಲೆಲ್ಲಾ ಎಲ್ಲಾ ಅಂಗಡಿಯವರು ದುಡ್ಡಾಕಿ ಕಸ ತೆಗೆಸುತ್ತೇವೆ. ಮಳೆ ಬಂದರಂತೂ ವಾರಕ್ಕೊಮ್ಮೆ ಕಸ ತೆಗೆಸಬೇಕಿದೆ. ಹೀಗೆ ಅನೇಕ ವರ್ಷಗಳಿಂದ ರಿಪೇರಿ ಮಾಡಿಸಿ ಮಾಡಿಸಿ ಸಾಕಾಗಿ ಹೋಗಿದೆ.

ಕರವೇ ಪ್ರಕಾಶ್, ಬೇಕರಿ ವ್ಯಾಪಾರಿ, ಹುಳಿಯಾರು

**ದುರ್ನಾಸನೆಯಿಂದ ವ್ಯಾಪಾರಕ್ಕೆ ಜನರೇ ಬರುತ್ತಿಲ್ಲ**

ತಿಂಗಳುಗಳ ಕಾಲ ನೀರು ಹರಿಯದೆ ನಿಂತಲ್ಲೇ ನಿಲ್ಲುತ್ತಿರುವುದರಿಂದ ದುರ್ನಾತದ ಜೊತೆಗೆ ಸೊಳ್ಳೆಗಳ ಕಾಟ ಹೆಚ್ಚಾಗಿದೆ. ಪರಿಣಾಮ ವ್ಯಾಪಾರಕ್ಕೆ ಅಂಡರ್‌ಗ್ರೌಂಡ್‌ಗೆ ಜನರೇ ಬರುತ್ತಿಲ್ಲ. ಬಂದರೂ ಮೂಗು ಮುಚ್ಚಿಕೊಂಡು ವ್ಯಾಪಾರ ಮಾಡಿ ಹೋಗುತ್ತಿದ್ದಾರೆ. ನಾವೂ ಕೂಡ ಗ್ರಾಹಕರಿಗೆ ತೊಂದರೆಯಾಗಬಾರದೆಂದು ಯಾವಾಗಲೂ ಸೊಳ್ಳೆಬತ್ತಿ ಹಚ್ಚೇ ಇರುತ್ತೇನೆ.

ರೇವಣ್ಣ, ಬಾಳೆಹಣ್ಣು ವ್ಯಾಪಾರಿ, ಹುಳಿಯಾರು

**ಹೊಸ ಶೌಚ ಗುಂಡಿಗೆ ಸಂಪರ್ಕ ಕೊಡುತ್ತೇವೆ**

ಹೊಸ ಶೌಚಗುಂಡಿಗೆ ಶೌಚಾಲಯದ ಸಂಪರ್ಕ ಕೊಟ್ಟರೆ ಸಮಸ್ಯೆ ಅರ್ಧ ಇತ್ಯಾರ್ಥ ಆದಂತೆ. ಹಾಗಾಗಿಯೇ ಶೀರ್ಘ ಹೊಸ ಗುಂಡಿಗೆ ಸಂಪರ್ಕ ಕೊಡುತ್ತೇವೆ. ಅಲ್ಲದೆ ಅಂಡರ್‌ಗ್ರೌಂಡ್‌ನಿಂದ ಬಂದಿರುವ ಪೈಪ್‌ಲೈನ್‌ನಲ್ಲಿ ನೀರು ಸರಾಗವಾಗಿ ಹುಳಿಯಾರು ಕೆರೆಗೆ ಹರಿದು ಹೋಗುವಂತೆ ಸಮಸ್ಯೆಗೆ ಶಾಶ್ವತ ಪರಿಹಾರಕ್ಕೆ ಮುಂದಾಗುತ್ತೇವೆ.

ಮಂಜುನಾಥ್, ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯ್ತಿ.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

## ಲಿಡ್ಕರ್ ನಿಗಮದಿಂದ ರಿಯಾಯತಿ ಮಾರಾಟ



ತುಮಕೂರು: ಡಾ: ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ವತಿಯಿಂದ ತುಮಕೂರು ಮಾರಾಟ ಮಳಿಗೆಯಲ್ಲಿ ಯುಗಾದಿ ಹಬ್ಬ, ರಂಜಾನ್ ಹಬ್ಬ ಹಾಗೂ ವರ್ಷಾಂತ್ಯದ ತೀರುವಳಿಯ ಪ್ರಯುಕ್ತ ಮಾರ್ಚ್ 6 ರಿಂದ 25ರವರೆಗೆ ವಿವಿಧ ದಾಸ್ತಾನುಗಳನ್ನು ರಿಯಾಯತಿ ದರದಲ್ಲಿ ಮಾರಾಟ ಮಾಡಲಾಗುವುದು.

ಚರ್ಮದ ಶೂ, ಚಪ್ಪಲಿ, ಚರ್ಮದ ವ್ಯಾನಿಟಿ ಬ್ಯಾಗ್, ಪರ್ಸ್, ಲೆದರ್ ಬೆಲ್ಟ್ ಮತ್ತು ಇತರೇ ದಾಸ್ತಾನುಗಳ ಮೇಲೆ ಶೇ.20ರ ರಿಯಾಯಿತಿಯಂತೆ ಮಾರಾಟ ಮಾಡಲಾಗುವುದು.

ಸಾರ್ವಜನಿಕರು ಹೆಚ್ಚಿನ ರೀತಿಯಲ್ಲಿ ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ತುಮಕೂರು ಮಾರಾಟ ಮಳಿಗೆಯ ಮತ್ತು ನಿಗಮದ ವ್ಯವಸ್ಥಾಪಕ ಮಂಜುನಾಥ್ ತಿಳಿಸಿದ್ದಾರೆ.

# ವಿಜ್ಞಾನದ ನೂತನ ಅವಿಷ್ಕಾರಗಳ ದುರ್ಬಳಕೆ



ತುಮಕೂರು: ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಕಂಡು ಕೇಳರಿಯದಷ್ಟು ನೂತನ ಸಂಶೋಧನೆ ಮಾಡಲಾಗಿದೆ. ಅದರ ಪರಿಣಾಮ ಎಲ್ಲಾ ಕ್ಷೇತ್ರಗಳ ಮೇಲಾಗಿದೆ. ಆದರೆ ಇಂದು ಅದನ್ನು ಬಳಸುವ ಶಕ್ತಿಗಳು ತಮ್ಮ ಸ್ವಾರ್ಥ ಲಾಲಸೆಯ ಮನೋಭಾವದಿಂದ ದುರ್ಬಳಕೆ ಮಾಡಿಕೊಳ್ಳುತ್ತಾ ಇಡೀ ಜಗತ್ತನ್ನು ಆತಂಕಕ್ಕೀಡು ಮಾಡುತ್ತಿದ್ದಾರೆ. ಇದಕ್ಕೆ ಸ್ಪಷ್ಟವಾದ ನೀತಿ ನಿರೂಪಣೆಯನ್ನು ಮಾಡಬೇಕಾಗಿದ್ದ ವಿಶ್ವಸಂಸ್ಥೆ ಇಂದು ಹಲ್ಲಿಲ್ಲದ ಹಾವಿನಂತಾಗಿದೆ ಎಂದು ಇತಿಹಾಸ ಸಂಶೋಧಕ ಡಾ. ಡಿ.ಎನ್ ಯೋಗೀಶ್ವರಪ್ಪ ನುಡಿದರು.

ಅವರು ನಗರದ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಇಡೀ ಏಷ್ಯಾ ಖಂಡಕ್ಕೆ ಭೌತಶಾಸ್ತ್ರ ವಿಷಯದಲ್ಲಿ ಮೊದಲ ನೊಬೆಲ್ ಪಾರಿತೋಷಕ ಪಡೆದ ಸರ್.ಸಿ.ವಿ. ರಾಮನ್ ತಮಿಳುನಾಡಿನ ಕಛೇರಿಯೊಂದರಲ್ಲಿ ಅಧಿಕಾರಿಯಾಗಿದ್ದು ನಂತರ ಅದನ್ನು ತ್ಯಜಿಸಿ ಪ್ರಾಧ್ಯಾಪಕ ವೃತ್ತಿ ಕೈಗೊಂಡು ಭೌತಶಾಸ್ತ್ರದಲ್ಲಿ ಬದುಕಿನುದ್ದಕ್ಕೂ ನಿರಂತರ ಸಂಶೋಧನೆ ನಡೆಸಿ ರಾಮನ್ ಪರಿಣಾಮ ಎಂಬ ಹೊಸ ಅವಿಷ್ಕಾರ ಮಾಡಿದರು. ಅವರ ನಿರಂತರ ಶ್ರಮ, ಏಕಾಗ್ರತೆ, ಸಂಶೋಧನೆ ಪ್ರಶ್ನಾರ್ಥಕ ಮನೋಭಾವದಂತಹ ಗುಣಗಳನ್ನು ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಏನಾದರೂ ಸಾಧಿಸಬಹುದು ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ತುಮಕೂರು ವಿಶ್ವವಿದ್ಯಾನಿಲಯದ ಭೌತಶಾಸ್ತ್ರ ವಿಜ್ಞಾನಿಗಳಾದ ಡಾ. ನಾಗಭೂಷಣ್ ರವರು ಮಾತನಾಡಿ ರಾಮನ್ ಪರಿಣಾಮದ ಕುರಿತು ವಿವರಗಳು ಪ್ರಕಟವಾದ ಕೇವಲ ಹನ್ನೆರಡು ವರ್ಷಗಳ ಅವಧಿಯಲ್ಲಿಯೇ ಆ ವಿದ್ಯಮಾನವನ್ನು ಕುರಿತು ಬೇರೆ ಬೇರೆ ದೇಶದ ವಿಜ್ಞಾನಿಗಳು ಬರೆದ 1800 ಪ್ರೌಢ ಪ್ರಬಂಧಗಳು ಪ್ರಕಟವಾದವು ಇದರ ಜೊತೆಗೆ ರಾಮನ್ ಅವರ ಅಧ್ಯಯನಗಳ ಫಲವಾಗಿ ಅದೇ ಕಾಲದಲ್ಲಿ ಸಾವಿರಾರು ರಾಸಾಯನಿಕ ಸಂಯುಕ್ತಗಳ ರಚನೆಯನ್ನು ಅಭ್ಯಾಸ ಮಾಡುವುದು ಸಾಧ್ಯವಾಯಿತು ಎಂದರು.

ರಾಮನ್ ಪರಿಣಾಮ ಕುರಿತು ಮಾತನಾಡಿದ ಅವರು ಯಾವುದೇ ಪಾರದರ್ಶಕ ರಸಾಯನಿಕ ವಸ್ತುವಿನ ಮೂಲಕ ಬೆಳಕನ್ನು ಹಾಯಿಸಿದಾಗ ಅದರಿಂದ ಹೊರಬರುವ ಕಿರಣಗಳು ಒಳಬರುವ ಕಿರಣಗಳಿಗಿಂತ ಭಿನ್ನವಾದ ದಿಕ್ಕಿನತ್ತ ಹೊರಳಿರುವುದನ್ನು ನಾವು ನೋಡಬಹುದು. ಹೀಗೆ ಚದುರಿದ ಬಹುಪಾಲು ಕಿರಣಗಳ ಸ್ವರೂಪ ಮೂಲ ಕಿರಣದಂತೆಯೇ ಇರುತ್ತದಾದರೂ ಒಂದಷ್ಟು ಭಾಗದ ಕಿರಣಗಳ ತರಂಗಾಂತರ ಮೂಲಕ್ಕಿಂತ ಬದಲಾಗಿರುತ್ತದೆ ಇದನ್ನೇ ರಾಮನ್ ಪರಿಣಾಮವೆಂದು ಹೇಳಲಾಗಿದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲರಾದ ಡಾ. ಟಿ.ಬಿ. ನಿಜಲಿಂಗಪ್ಪ ಮಾತನಾಡಿ ಭಾರತ ದೇಶ ವಿಜ್ಞಾನ ತಂತ್ರಜ್ಞಾನದಲ್ಲಿ ಅಗಾಧ ಸಾಧನೆ ಮಾಡಿದ್ದು ಭಾರತೀಯರು ಚಂದ್ರಲೋಕಕ್ಕೂ ಹೋಗಿ ಸಂಶೋಧನೆ ನಡೆಸುತ್ತಿದ್ದಾರೆ. ಜೀವನದ ಅವಿಭಾಜ್ಯ ಅಂಗವಾದ ವಿಜ್ಞಾನವನ್ನು ವಿದ್ಯಾರ್ಥಿಗಳು ಓದಿ ಮೂಲ ವಿಜ್ಞಾನದ ವಿಷಯಗಳ ಬಗ್ಗೆ ಸಂಶೋಧನೆ ಮಾಡಿ ವಿಜ್ಞಾನಿಗಳಾಗಬೇಕೆಂದು ಕರೆ ನೀಡಿದರು. ವಿಜ್ಞಾನದಲ್ಲಿನ ಪ್ರಬಂಧ ಸ್ಪರ್ಧೆಯಲ್ಲಿ ಬಹುಮಾನ ಪಡೆದವರಿಗೆ ಪ್ರಮಾಣ ಪತ್ರ ಮತ್ತು ನಗದು ಬಹುಮಾನ ನೀಡಲಾಯಿತು.

ವೇದಿಕೆಯಲ್ಲಿ ಪ್ರಾಧ್ಯಾಪಕಿ ಸರ್ವಮಂಗಳಾ, ಡಾ. ರೇವಣ್ಣಸಿದ್ದಪ್ಪ, ಡಾ. ಶೈಲೇಶ್ ಹಾಜರಿದ್ದರು. ಪ್ರೇರಣ ಪ್ರಾರ್ಥಿಸಿದರು. ಪ್ರಾಧ್ಯಾಪಕಿ ದಿವ್ಯ ಸ್ವಾಗತಿಸಿದರು, ಪಲ್ಲವಿ ವಂದಿಸಿದರು. ಭಾವಚಿತ್ರನಗರದ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ಇತಿಹಾಸ ಸಂಶೋಧಕ ಡಾ. ಡಿ.ಎನ್ ಯೋಗೀಶ್ವರಪ್ಪ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಬಹುಮಾನ ಪಡೆದ ವಿದ್ಯಾರ್ಥಿಗಳೊಂದಿಗೆ ಡಾ. ಟಿ.ಬಿ. ನಿಜಲಿಂಗಪ್ಪ, ಡಾ. ನಾಗಭೂಷಣ, ಶ್ರೀಮತಿ ದಿವ್ಯ, ಶ್ರೀಮತಿ ಸರ್ವಮಂಗಳ ಇತರರಿದ್ದಾರೆ.

# ಮಾದಿಹಳ್ಳಿ ಶ್ರೀ ಬಸವೇಶ್ವರ ದೇವಸ್ಥಾನಕ್ಕೆ ಧರ್ಮಸ್ಥಳದಿಂದ ಸಹಾಯಧನ ವಿತರಣೆ



ಹುಳಿಯಾರು : ಚಿಕ್ಕನಾಯಕನಹಳ್ಳಿ ತಾಲೂಕಿನ ಶೆಟ್ಟಿಕೆರೆ ಹೋಬಳಿಯ ಮಾದಿಹಳ್ಳಿ ಶ್ರೀ ಬಸವೇಶ್ವರ ದೇವಸ್ಥಾನದ ನೂತನ ದೇವಾಲಯದ ನಿರ್ಮಾಣಕ್ಕಾಗಿ ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ಮಂಜೂರುಗೊಂಡ 1,50,000/– ಮೊತ್ತದ ಡಿಡಿ ಯನ್ನು ವಿತರಣೆ ಮಾಡಲಾಯಿತು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ತಾಲೂಕು ಯೋಜನಾಧಿಕಾರಿ ಪ್ರೇಮಾನಂದ ಯಲ್.ಬಿ. ಯವರು ಡಿಡಿ ವಿತರಣೆ ಮಾಡಿ ಮಾತನಾಡಿ "ಚತುರ್ವಿಧ ದಾನಗಳಿಗೆ ಹೆಸರುವಾಸಿಯಾದ ಶ್ರೀ ಕ್ಷೇತ್ರ ಧರ್ಮಸ್ಥಳವು ನಿರಂತರವಾಗಿ ರಾಜ್ಯದ ಅನೇಕ ದೇವಸ್ಥಾನಗಳ ಜೀರ್ಣೋದ್ದಾರಕ್ಕೆ ಕೈಜೋಡಿಸಿದೆ ಎಂದರು.

ಸಮುದಾಯದ ಅನೇಕ ಕಾರ್ಯ ಚಟುವಟಿಕೆಗಳಾದ ನಮ್ಮೂರು ನಮ್ಮಕೆರೆ, ಶುದ್ಧ ಕುಡಿಯುವ ನೀರಿನ ಘಟಕ, ರುದ್ರ ಭೂಮಿ ಅಭಿವೃದ್ಧಿಗೆ ಅನೇಕ ಕಾರ್ಯಕ್ರಮಗಳ ಮೂಲಕ ಜನಪರವಾಗಿ ಕೆಲಸ ಮಾಡುತ್ತಾ ಇದೆ. ಆರ್ಥಿಕ ಸಬಲೀಕರಣ, ಮಹಿಳಾ ಸಬಲೀಕರಣಕ್ಕೆ ಹೆಚ್ಚು ಒತ್ತು ಕೊಡುತ್ತ ಇದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಜೀರ್ಣೋದ್ದಾರ ಸಮಿತಿ ಅಧ್ಯಕ್ಷರಾದ ನಂದೀಶ ಕುಮಾರ, ಉಪಾಧ್ಯಕ್ಷರಾದ ರಂಗನಾಥಸ್ವಾಮಿ, ಶಾಲಾ ಮುಖ್ಯ ಗುರುಗಳಾದ ಮಲ್ಲಿಕಾರ್ಜುನಯ್ಯ, ಸೇವಾಪ್ರತಿನಿಧಿ ಜಯಂತಿ, ಸಮಿತಿ ಸದಸ್ಯರುಗಳಾದ ವಿನಯ್, ಅಭಿಷೇಕ್, ಗಂಗಾಧರಯ್ಯ, ಸ್ವಸಹಾಯ ಸಂಘಗಳ ಸದಸ್ಯರುಗಳು ಉಪಸ್ಥಿತರಿದ್ದರು.

# ವಿದ್ಯಾವಾಹಿನಿ ಕಾಲೇಜಿನಲ್ಲಿ ಕ್ಯಾಂಪಸ್ ಸಂದರ್ಶನ




ತುಮಕೂರು: ನಗರದ ವಿದ್ಯಾವಾಹಿನಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಂತಿಮ ವರ್ಷದ ಬಿಸಿಎ ವಿದ್ಯಾರ್ಥಿಗಳಿಗೆ ಕೋಡ್‌ಯಂಗ್ ಕಂಪನಿಯಿಂದ ಎಥನೋಟೆಕ್ ಅಕಾಡಮಿಯ ಸಹಯೋಗದೊಂದಿಗೆ ಕ್ಯಾಂಪಸ್ ಸಂದರ್ಶನವನ್ನು ಆಯೋಜಿಸಲಾಗಿತ್ತು.

ಈ ಕೋಡ್‌ಯಂಗ್ ಕಂಪನಿಯ ಉದ್ಯೋಗ ಆಯ್ಕೆ ಪ್ರಕ್ರಿಯೆಯಲ್ಲಿ ಒಟ್ಟು 06 ವಿದ್ಯಾರ್ಥಿಗಳು ಆಯ್ಕೆಯಾಗಿದ್ದು, ಇವರಿಗೆ ವಾರ್ಷಿಕ ವೇತನವಾಗಿ 8.36 ಲಕ್ಷ ರೂಪಾಯಿಯ ಉದ್ಯೋಗ ಖಾತರಿ ಪತ್ರವನ್ನು ಪಡೆದಿರುತ್ತಾರೆ.

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳನ್ನು ಕುರಿತು ಮಾತನಾಡಿದ ವಿದ್ಯಾವಾಹಿನಿ ಸಮೂಹ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ. ಎನ್.ಬಿ. ಪ್ರದೀಪ್ ಕುಮಾರ್ ಅವರು ನಮ್ಮ ಅಂತಿಮ ವರ್ಷದ ಬಿಸಿಎ ವಿದ್ಯಾರ್ಥಿಗಳಲ್ಲಿ 06 ವಿದ್ಯಾರ್ಥಿಗಳು ಪ್ರತಿಷ್ಠಿತ ಕಂಪನಿಯಲ್ಲೊಂದಾದ ಕೋಡ್‌ಯಂಗ್ ಕಂಪನಿಗೆ ಆಯ್ಕೆಯಾಗಿರುವುದು ಸಂತೋಷದ ಸಂಗತಿ ಎಂದು ತಿಳಿಸಿದ್ದಾರೆ. ವಿದ್ಯಾರ್ಥಿಗಳಿಗೆ ಪದವಿ ಹಂತದಲ್ಲಿ ಶಿಕ್ಷಣದೊಂದಿಗೆ ಉದ್ಯೋಗ ಒದಗಿಸುವುದು ಬಹಳಷ್ಟು ಮುಖ್ಯವಾಗಿದ್ದು, ಅದನ್ನು ನಮ್ಮ ಸಂಸ್ಥೆಯಲ್ಲಿ ಪರಿಣಾಮಕಾರಿಯಾಗಿ ಮಾಡುತ್ತಿದ್ದೇವೆ.

ಇದರ ಸಲುವಾಗಿ ಎಥನೋಟೆಕ್ ಅಕಾಡಮಿಯ ಶ್ರೀ. ಸೈಯದ್ ಮೋಮೀನ್ ನಮ್ಮೊಂದಿಗೆ ಕೈಜೋಡಿಸಿ ನಿರಂತರವಾಗಿ ಸಹಕರಿಸುತ್ತಿದ್ದಾರೆ, ಹಾಗೂ ಕೋಡ್‌ಯಂಗ್ ಕಂಪನಿಯ ಎಚ್.ಆರ್ ಆಗಿರುವ ಶ್ರೀ. ಹಮೀದ್ ಖಾನ್ ಹಾಗೂ ಶ್ರೀ. ಮನೋಜ್ ಅವರು ಈ ಉದ್ಯೋಗ ಸಂದರ್ಶನವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು. ಕಾಲೇಜಿನ ವತಿಯಿಂದ ತುಂಬು ಹೃದಯದ ಧನ್ಯವಾದಗಳನ್ನು ಕಂಪನಿಯ ಎಚ್.ಆರ್ ಗಳಿಗೆ ಕಾರ್ಯದರ್ಶಿಗಳು ತಿಳಿಸಿ, ಆಯ್ಕೆಯಾದ ವಿದ್ಯಾರ್ಥಿಗಳು ವೃತ್ತಿ ಜೀವನದಲ್ಲಿ ಯಶಸ್ವಿಯಾಗಲಿ ಎಂದು ಶುಭ ಹಾರೈಸಿ, ಅಭಿನಂದಿಸಿದರು.

# ಅಪೆಕ್ಸ್ ಬ್ಯಾಂಕ್ ನಿಂದ ಡಿಸಿಸಿ ಬ್ಯಾಂಕ್‌ಗೆ ಶೇ ಕಡ 8% ರಷ್ಟು ಬಡ್ಡಿಗೆ ಹಣ ನೀಡಿದರೆ:

## ಡಿಸಿಸಿ ಬ್ಯಾಂಕ್ ರೈತರಿಗೆ 0% ಬಡ್ಡಿ ಸಾಲ ನೀಡುತ್ತದೆ




ಚಿಕ್ಕನಾಯಕನಹಳ್ಳಿ : ಅಪೆಕ್ಸ್ ಬ್ಯಾಂಕ್ ನಿಂದ ಡಿಸಿಸಿ ಬ್ಯಾಂಕ್ ಗೆ ಹಣವನ್ನು ಶೇಕಡ 8% ರಷ್ಟು ಬಡ್ಡಿಗೆ ನೀಡುತ್ತಾರೆ ಆದರೆ ಡಿಸಿಸಿ ಬ್ಯಾಂಕ್ ನಲ್ಲಿ ಅಧ್ಯಕ್ಷರಾದ ಕೆ.ಎನ್.ರಾಜಣ್ಣನವರು ರೈತರಿಗೆ ಅನುಕೂಲವಾಗಲಿ ಎಂದು 0% ಬಡ್ಡಿಗೆ ರೈತರಿಗೆ ಸಾಲ ನೀಡುತ್ತಾರೆ ಅವರ ಸಹಕಾರಿಂದ ಚಿಕ್ಕನಾಯಕನಹಳ್ಳಿ ಕಸಬಾ ಸೊಸೈಟಿ ಒಂದರಲ್ಲೇ 5 ಕೋಟಿ 60 ಲಕ್ಷ ಸಾಲ ನೀಡಿದ್ದೇವೆ ಎಂದು ಡಿಸಿಸಿ ಬ್ಯಾಂಕ್ ನಿರ್ದೇಶಕ ಸಿಂಗದಹಳ್ಳಿ ರಾಜ್ ಕುಮಾರ್ ಹೇಳಿದರು.

ಪಟ್ಟಣದ ಕಸಬಾ ಸೊಸೈಟಿಯಲ್ಲಿ ಹಮ್ಮಿಕೊಂಡಿದ್ದ ಕೆಸಿಸಿ ಸಾಲ ವಿತರಣೆ ಹಾಗೂ ಡಿಸಿಸಿ ಬ್ಯಾಂಕ್ ಗೆ 4ನೇ ಬಾರಿ ನಿರ್ದೇಶಕರಾಗಿ ಆಯ್ಕೆಯಾದ ಸಿಂಗದಹಳ್ಳಿ ರಾಜ್ ಕುಮಾರ್ ರವರನ್ನು ಸೊಸೈಟಿ ಅಧ್ಯಕ್ಷರು, ನಿರ್ದೇಶಕರು ಸನ್ಮಾನಿಸಿದ ನಂತರ ಮಾತನಾಡಿದರು.

ನಾನು ಡಿಸಿಸಿ ಬ್ಯಾಂಕ್ ನಿರ್ದೇಶಕನಾಗುವ ಮೊದಲು ಕಸಬಾ ಸೊಸೈಟಿಯಲ್ಲಿ ನೂರ ರಷ್ಟು ರೈತರು ಸಾಲ ಪಡೆಯುತ್ತಿದ್ದರು ಈಗ ಸಾವಿರಾರು ಜನರು ಸಾಲ ಪಡೆಯುತ್ತಿದ್ದಾರೆ ಅದು 0% ಬಡ್ಡಿಯಲ್ಲಿ, ಕಸಬಾ ಸೊಸೈಟಿಯಲ್ಲಿ ಸಾಲ ಪಡೆದು ಮರಣ ಹೊಂದಿದ 338 ರೈತರ 75 ಲಕ್ಷ ರೂ ಸಾಲ ಮನ್ನಾ ಆಗಿದೆ. ಇಡೀ ಜಿಲ್ಲೆಯಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿಯೇ ಅತಿ ಹೆಚ್ಚು ಸಾಲ ಮನ್ನಾ ಆಗಿರುವುದು ಅಂದರೆ ತಾಲ್ಲೂಕಿನಲ್ಲಿ ಅತಿ ಹೆಚ್ಚು ಜನರಿಗೆ ಆಗಿನಿಂದಲೂ ಕೆ.ಎನ್.ರಾಜಣ್ಣನವರ ಸಹಕಾರದಿಂದ ಸಾಲ ವಿತರಿಸಲಾಗುತ್ತಿದೆ ಎಂದರು.

ಸೊಸೈಟಿ ನಿರ್ದೇಶಕರಾದ ರೇಣುಕಾ ಗುರುಮೂರ್ತಿಯವರು ಹೇಳಿದಂತೆ ಅವರು ಅಂದುಕೊಂಡಂತೆ ನಿರೀಕ್ಷಿತ ಜನರಿಗೆ ಸಾಲ ನೀಡಲಾಗಿಲ್ಲವೆಂದರೆ ರೈತರು ಪಿಎಲ್ ಡಿ ಬ್ಯಾಂಕ್, ಕೆನರಾ ಬ್ಯಾಂಕ್ ಗಳಲ್ಲಿ ಸಾಲ ಪಡೆದದ್ದು ಪಹಣಿಯಲ್ಲಿ ದಾಖಲಾಗಿರುತ್ತದೆ ಆ ದಾಖಲೆ ಇಲ್ಲದಿದ್ದರೆ ಸಾಲ ವಿತರಿಸಬಹುದು, ಸಾಲ ತೀರುವಳಿಯಾಗಿರಬೇಕು ಎಂದರಲ್ಲದೆ ಮುಖ್ಯ ಮಂತ್ರಿಗಳಾಗಿ ಯಡಿಯೂರಪ್ಪ ನವರ ಸರ್ಕಾರವಿದ್ದಾಗಲೂ, ಕುಮಾರಸ್ವಾಮಿ ಯವರ ಸರ್ಕಾರವಿದ್ದಾಗಲೂ, ಸಿದ್ದರಾಮಯ್ಯ ನವರು ಸಹ ರೈತರ ಸಾಲ ಮನ್ನಾ ಮಾಡಿದ್ದಾರೆ. ಇದರಿಂದ ತಾಲ್ಲೂಕಿನ ಸಾವಿರಾರು ಜನ ರೈತರಿಗೆ ಆರ್ಥಿಕವಾಗಿ ಸಹಾಯವಾಗಿದೆ ಎಂದರು.

ಡಿಸಿಸಿ ಬ್ಯಾಂಕ್ ನಬಾರ್ಡ್ ಗೈಡ್ ಲೈನ್ ಮೇಲೆ ಸಾಲ ವಿತರಿಸುತ್ತಿದೆ. ಈ ಹಿಂದೆ 70 ವರ್ಷ ಆದವರಿಗೂ ಸಾಲ ನೀಡಲಾಗುತ್ತಿತ್ತು ಆದರೆ ಇತ್ತೀಚಿಗೆ ನಬಾರ್ಡ್ ತನ್ನ ಗೈಡ್ ಲೈನ್ ನನ್ನು ಬಿಗಿಗೊಳಿಸಿದೆ ಎಂದರಲ್ಲದೆ ತಾಲ್ಲೂಕಿನಲ್ಲಿ ಪಹಣಿ ಹೊಂದಿದ ಎಲ್ಲರಿಗೂ ಸಾಲ ವಿತರಿಸಲಾಗಿದೆ ಎಂದರು.

ರೈತರಿಗೆ ಸಹಾಯ ಮಾಡಲು ನಾನು ಎಂದಿಗೂ ಸಹ ಒಂದು ಹೆಜ್ಜೆ ಮುಂದೆ ಇರುತ್ತೇನೆ. ಅಡಿಕೆ ಅಡಮಾನ ಬಡ್ಡಿ ಈ ಮೊದಲು ಶೇ.12% ಇತ್ತು, ಈಗ ಅದನ್ನು 10% ಇಳಿಸಲಾಗಿದೆ. ಕಸಬಾ ಸೊಸೈಟಿಯಲ್ಲಿ ರೈತರು ಅಡಿಕೆ ಅಡಮಾನವನ್ನು ಇಡಲು ಕಟ್ಟಡದ ಅವಶ್ಯಕತೆ ಇದ್ದರೆ ಬ್ಯಾಂಕ್ ಗೆ ಮನವಿ ಸಲ್ಲಿಸಿ ಈ ಬಗ್ಗೆ ಕೇಂದ್ರ ಕಛೇರಿಯಲ್ಲಿ ಚರ್ಚಿಸುತ್ತೇನೆ ಎಂದ ಅವರು, ರೈತರು ಯಶಸ್ವಿನಿ ಯೋಜನೆಯನ್ನು ನೊಂದಣಿ ಮಾಡಿಸಿ ಯೋಜನೆಯಿಂದ ದೊಡ್ಡ ದೊಡ್ಡ ಕಾಯಿಲೆಗಳಿಗೆ ಆಸ್ಪತ್ರೆಗಳ ಬಿಲ್ ಕಟ್ಟಲು ಸಹಾಯವಾಗುತ್ತದೆ ಎಂದು ಸಲಹೆ ನೀಡಿದರು. ಕಸಬಾ ಸೊಸೈಟಿ ಅಧ್ಯಕ್ಷ ಪ್ರಸನ್ನಕುಮಾರ್ ಮಾತನಾಡಿ, 208 ಜನರಿಗೆ ಈ ಬಾರಿ ಕೆಸಿಸಿ ಸಾಲ ಕೊಡಲಾಗಿದೆ. (ಪುಟ–4)

# ಹುದ್ದೆ ನೇಮಕಾತಿಯಲ್ಲೂ ಒಳಮೀಸಲಾತಿ ಜಾರಿಯಾಗಲಿ

## ಅಧಿವೇಶನದಲ್ಲಿ ಚರ್ಚೆಗೆ ಸುರೇಶ್‌ಗೌಡರಿಗೆ ಮುಖಂಡರ ಮನವಿ



ತುಮಕೂರು: ಹುದ್ದೆಗಳ ನೇಮಕಾತಿಯಲ್ಲೂ ಪರಿಶಿಷ್ಟ ಜಾತಿಯ ಒಳಮೀಸಲಾತಿ ಜಾರಿ ಮಾಡಬೇಕು ಎಂದು ಒತ್ತಾಯಿಸಿ ವಿಧಾನಸಭಾ ಅಧಿವೇಶನದಲ್ಲಿ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕು ಎಂದು ಕೋರಿ ಮಾದರ ಮಹಾಸಭಾದ ಮುಖಂಡರು ತುಮಕೂರು ಗ್ರಾಮಾಂತರ ಕ್ಷೇತ್ರದ ಶಾಸಕ ಬಿ.ಸುರೇಶ್‌ಗೌಡರಿಗೆ ಗುರುವಾರ ಮನವಿಪತ್ರ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಮಾದರ ಮಹಾಸಭಾ ಜಿಲ್ಲಾಧ್ಯಕ್ಷ ವೈ.ಹೆಚ್. ಹುಚ್ಚಯ್ಯ, ಪರಿಶಿಷ್ಟ ಜಾತಿಯಲ್ಲಿರುವ 101 ಕೋಮುಗಳಿಗೆ ಒಳಮೀಸಲಾತಿ ಕಲ್ಪಿಸುವಂತೆ ಒತ್ತಾಯಿಸಿ 35 ವರ್ಷಗಳಿಂದ ಮಾದಿಗ ಸಮುದಾಯದಿಂದ ಹೋರಾಟ ನಡೆಯುತ್ತಿದೆ. ಇದರ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ ದಿ.1.8.24ರಂದು ಸ್ಪಷ್ಟ ಆದೇಶ ನೀಡಿ ಆಯಾ ರಾಜ್ಯ ಸರ್ಕಾರಗಳೇ ಪರಿಶಿಷ್ಟ ಜಾತಿಯಲ್ಲಿನ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ಔದ್ಯೋಗಿಕ ದತ್ತಾಂಶಗಳನ್ನು ಕ್ರೂಢೀಕರಣ ಮಾಡಿ ಅದರ ಆಧಾರದ ಮೇಲೆ ಒಳಮೀಸಲಾತಿ ಕಲ್ಪಿಸುವಂತೆ ತಿಳಿಸಿದೆ ಎಂದು ವಿವರಿಸಿದರು.

ಇದರ ಸಂಬಂಧವಾಗಿ ಸರ್ಕಾರ ನ್ಯಾಯಮೂರ್ತಿ ನಾಗಮೋಹನದಾಸ್ ಅವರ ಆಯೋಗ ರಚನೆ ಮಾಡಿ ಅವರಿಂದ ಪಡೆದ ವರದಿಯ ಆಧಾರದ ಮೇಲೆ ಮಾದಿಗ ಸಂಬಂಧಿತ ಜಾತಿಗಳಿಗೆ 6, ಹೊಲೆಯ ಸಂಬಂಧಿತ ಜಾತಿಗಳಿಗೆ 6 ಮತ್ತು ಸ್ಪೃಶ್ಯ ಜಾತಿಗಳೊಂದಿಗೆ ಅಲೆಮಾರಿ ಜನಾಂಗಗಳನ್ನು ಸೇರಿಸಿ 5ರ ಅನುಪಾತದಲ್ಲಿ ಒಳಮೀಸಲಾತಿ ಜಾರಿ ಮಾಡಲು ತೀರ್ಮಾನ ಮಾಡಿತ್ತು. ಆದರೆ ಮೀಸಲಾತಿ ಪ್ರಮಾಣ ಶೇಕಡ 50ಕ್ಕಿಂತ ಜಾಸ್ತಿ ಆಗದಂತೆ ಉದ್ಯೋಗ ನೇಮಕಾತಿ ಮಾಡಬೇಕೆಂದು ಸರ್ವೋಚ್ಚ ನ್ಯಾಯಾಲಯ ತೀರ್ಪು ನೀಡಿರುವುದರಿಂದ, ಅದರಂತೆಯೇ ಶೇಕಡ 50ರ ಅಡಿಯಲ್ಲಿ ಪರಿಶಿಷ್ಟ ಜಾತಿಯ ಶೇಕಡ 15ರ ಮೀಸಲಾತಿಯಲ್ಲಿಯೇ ಒಳಮೀಸಲಾತಿ ಕಲ್ಪಿಸುವಂತೆ ಮಾದಿಗ ಸಮುದಾಯ ಸರ್ಕಾರವನ್ನು ಒತ್ತಾಯಿಸುತ್ತದೆ ಎಂದು ವೈ.ಹೆಚ್. ಹುಚ್ಚಯ್ಯ ಹೇಳಿದರು.

ಆದರೆ ದಿ. 27.2.2026ರಂದು ಸರ್ಕಾರ ಒಳಮೀಸಲಾತಿ ಜಾರಿಯನ್ನು ಕೈಬಿಟ್ಟು 56432 ಹುದ್ದೆಗಳ ನೇಮಕಾತಿಗೆ ಆದೇಶ ಹೊರಡಿಸಿರುವುದರಿಂದ ಪರಿಶಿಷ್ಟ ಜಾತಿಗಳಿಗೆ ಅನ್ಯಾಯವಾಗುತ್ತಿದೆ. ಅದರಲ್ಲೂ ಮಾದಿಗ ಸಮುದಾಯಕ್ಕೆ ತೀವ್ರ ಅನ್ಯಾಯವಾಗುತ್ತಿದೆ. ಆದ್ದರಿಂದ ಸರ್ಕಾರ ಈ ಅನ್ಯಾಯವನ್ನು ಸರಿಪಡಿಸಿ 56432 ಹುದ್ದೆಗಳ ನೇಮಕಾತಿಯಲ್ಲಿಯೇ ಒಳಮೀಸಲಾತಿ ಜಾರಿ ಮಾಡಿ ನ್ಯಾಯ ಒದಗಿಸಬೇಕು. ಈ ಬಗ್ಗೆ ವಿಧಾನಸಭಾ ಅಧಿವೇಶನದಲ್ಲಿ ಚರ್ಚೆ ಮಾಡಿ, ಸರ್ಕಾರಕ್ಕೆ ಶಿಫಾರಸು ಮಾಡುವಂತೆ ಶಾಸಕ ಬಿ.ಸುರೇಶ್‌ಗೌಡರಿಗೆ ಮನವಿ ಮಾಡಿದರು.ಈ ವೇಳೆ ಕರ್ನಾಟಕ ಮಾದರ ಮಹಾಸಭಾ ರಾಜ್ಯ ಕಾರ್ಯಕಾರಣಿ ಸದಸ್ಯ ನರಸಿಂಹಮೂರ್ತಿ, ಜಿಲ್ಲಾ ಖಜಾಂಚಿ ಸಿ.ಗಂಗರಾಜು, ತುಮಕೂರು ತಾಲ್ಲೂಕು ಅಧ್ಯಕ್ಷ ಹೆಚ್.ಎ.ಆಂಜಿನಪ್ಪ, ಕಾರ್ಯದರ್ಶಿ ಎಲ್.ವಿ.ದಾಸಪ್ಪ ಹಾಗೂ ಪದಾಧಿಕಾರಿಗಳು ಹಾಜರಿದ್ದರು.

SP NEWS ಸಣ್ ಸುದ್ದಿ

## ಬಸ್ ನಿಲ್ದಾಣಗಳಲ್ಲಿ ಬಜೆಟ್ ನೇರ ಪ್ರಸಾರ

ತುಮಕೂರು: ಕರ್ನಾಟಕ ಸರ್ಕಾರದ 2026–27ನೇ ಸಾಲಿನ ಆಯವ್ಯಯವನ್ನು ಹಣಕಾಸು ಸಚಿವರೂ ಆಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾರ್ಚ್ 6 ಶುಕ್ರವಾರದಂದು ಮಂಡಿಸಲಿದ್ದಾರೆ. 17ನೇ ಬಾರಿ ಬಜೆಟ್ ಮಂಡಿಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಾಖಲೆ ಸೃಷ್ಟಿಸಿದ್ದು, ಈ ಬಜೆಟ್ ಮಂಡನೆಯ ನೇರ ಪ್ರಸಾರವನ್ನು ರಾಜ್ಯದ ಆಯ್ದ ಬಸ್ ನಿಲ್ದಾಣದ ಟಿವಿಗಳಲ್ಲಿ ಹಮ್ಮಿಕೊಳ್ಳಲಾಗಿದೆ. ರಾಜ್ಯದ 230 ಸರ್ಕಾರಿ ಬಸ್ ನಿಲ್ದಾಣಗಳಲ್ಲಿ ಪ್ರಸಾರ ಮಾಡಲು ಉದ್ದೇಶಿಸಿದೆ. ಕರ್ನಾಟಕ ರಾಜ್ಯದ ಸುದೀರ್ಘ ಅವಧಿಗೆ ಮುಖ್ಯಮಂತ್ರಿ ಆಗಿ ಕಾರ್ಯನಿರ್ವಹಿಸುತ್ತಿರುವ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ದಿನಾಂಕ 06 ಮಾರ್ಚ್ 2026ರಂದು ವಿಧಾನಸೌಧದಲ್ಲಿ ರಾಜ್ಯದ ಬಜೆಟ್ ಮಂಡಿಸಲಿದ್ದಾರೆ.

ಈ ಮಹತ್ವದ ಬಜೆಟ್ ಮಂಡನೆಯ ನೇರ ಪ್ರಸಾರವನ್ನು ರಾಜ್ಯದ ಜನತೆಗೆ ತಲುಪಿಸುವ ಉದ್ದೇಶದಿಂದ ವೃತ್ತಿ ಸೊಲ್ಯೂಷನ್ಸ್ ಲಿಮಿಟೆಡ್ ಸಂಸ್ಥೆಯು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಯೋಗದೊಂದಿಗೆ ರಾಜ್ಯದಾದ್ಯಂತ ಇರುವ 230 ಸರ್ಕಾರಿ ಬಸ್ ನಿಲ್ದಾಣಗಳಲ್ಲಿ ಇರುವ ತನ್ನ ಡಿಜಿಟಲ್ ಡಿಸ್ಪ್ಲೇ (ಐಇಆ) ಪರದೆಗಳ ಮೂಲಕ ನೇರ ಪ್ರಸಾರ ಮಾಡಲು ಮುಂದಾಗಿದೆ.ಈ ಮೂಲಕ ರಾಜ್ಯದ ಜನತೆಗೆ ಸರ್ಕಾರದ ಬಜೆಟ್ ಕುರಿತು ನೇರವಾಗಿ ಮಾಹಿತಿ ಪಡೆಯುವ ಅವಕಾಶ ಕಲ್ಪಿಸಲಾಗುತ್ತಿದೆ ಎಂದು ಪ್ರಕಟಣೆ ತಿಳಿಸಿದೆ.

# ತುಮಕೂರು ಜಿಲ್ಲೆಯ ರೇಷ್ಮೆ ಬೆಳೆಗಾರರಿಗೆ ಪ್ರಶಸ್ತಿ







ತುಮಕೂರು: ಮೈಸೂರು ಕೇಂದ್ರ ರೇಷ್ಮೆ ಮಂಡಳಿಯ ಕೇಂದ್ರೀಯ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ ವತಿಯಿಂದ ನಡೆದ ರೇಷ್ಮೆ ಕೃಷಿ ಮೇಳ2026ರಲ್ಲಿ ಮಂಗಳವಾರ ತುಮಕೂರು ಜಿಲ್ಲೆಯ ಇಬ್ಬರು ರೇಷ್ಮೆ ಬೆಳೆಗಾರರಿಗೆ ರೇಷ್ಮೆ ರೈತರ ಪ್ರಶಸ್ತಿ ಲಭಿಸಿದೆ.

ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ಮರಡಿಪಾಳ್ಯ ಗ್ರಾಮದ ಮಂಜುಳ ಕೋಂ ನಾಗೇಶ್ ಹಾಗೂ ತುಮಕೂರು ತಾಲ್ಲೂಕಿನ ಹಿರೇಗುಂಡಗಲ್ ಗ್ರಾಮದ ಜಯಮ್ಮ ಕೋಂ ಭೂತಯ್ಯ ಅವರಿಗೆ ಪ್ರಶಸ್ತಿ ಲಭಿಸಿದ್ದು, ಇವರು ವೈಜ್ಞಾನಿಕವಾಗಿ ಹಿಪ್ಪು ನೇರಳೆ ತೋಟ ಅಭಿವೃದ್ಧಿಪಡಿಸಿ, ಹೆಚ್ಚಿನ ಇಳುವರಿ ಪಡೆದು ಉತ್ತಮ ಗುಣ ಮಟ್ಟದ ದ್ವಿತಳಿ ರೇಷ್ಮೆ ಗೂಡುಗಳನ್ನು ಬೆಳೆದು ಆರ್ಥಿಕಾಭಿವೃದ್ಧಿ ಹೊಂದಿರುತ್ತಾರೆ. ಪ್ರಶಸ್ತಿಯನ್ನು ರೇಷ್ಮೆ ಕೃಷಿ ಮೇಳದಲ್ಲಿ ಸನ್ಮಾನ ಪತ್ರದೊಂದಿಗೆ ನೀಡಲಾಗಿದ್ದು, ಇದು ರೇಷ್ಮೆ ಬೆಳೆಗಾರರು ಹಾಗೂ ರೇಷ್ಮೆ ಇಲಾಖೆಗೆ ಹೆಮ್ಮೆಯ ವಿಷಯವಾಗಿದೆ. ಇನ್ನುಳಿದ ರೇಷ್ಮೆ ಬೆಳೆಗಾರರಿಗೆ ಸ್ಫೂರ್ತಿಯಾಗಲಿದೆ ಎಂದು ರೇಷ್ಮೆ ಉಪನಿರ್ದೇಶಕ ಟಿ. ಲಕ್ಷ್ಮೀನರಸಯ್ಯ ತಿಳಿಸಿದ್ದಾರೆ.

# ಸುಸಜ್ಜಿತ ಕುರಿ,ಮೇಕೆ ಡಿಜಿಟಲ್ ಮಾರುಕಟ್ಟೆ ಕೇಂದ್ರದ ಸ್ಥಾಪನೆಗೆ ಸ್ಥಳ ವೀಕ್ಷಣೆ – ಶಾಸಕ ಸಿ.ಬಿ.ಸುರೇಶ್‌ಬಾಬು



1 ಕೋಟಿ 66ಲಕ್ಷ 54ಸಾವಿರ ವೆಚ್ಚದಲ್ಲಿ ಚಿಕ್ಕನಾಯಕನಹಳ್ಳಿ05:– ತಾಲ್ಲೂಕಿನ ರೈತರಿಗಾಗಿ ಸುಸಜ್ಜಿತ ಎಲ್ಲಾ ವ್ಯವಸ್ಥೆಗಳನ್ನೊಳಗೊಂಡ ಅಧುನಿಕ ತಂತ್ರಜ್ಞಾನದೊಂದಿಗೆ ಕುರಿ ಮೇಕೆ ಮಾರಾಟ ಕೇಂದ್ರವನ್ನು ಸ್ಥಾಪಿಸಲಾಗುವುದು ಎಂದು ಶಾಸಕ ಸಿ.ಬಿ.ಸುರೇಶ್‌ಬಾಬು ತಿಳಿಸಿದರು.

ಪಟ್ಟಣದ ಉಪ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಆವರಣದಲ್ಲಿ ಗುರುವಾರ ಕುರಿ ಮೇಕೆ ಮಾರುಕಟ್ಟೆ ನಿರ್ಮಿಸಲು ಸ್ಥಳ ವೀಕ್ಷಣೆ ಮಾಡಿ ಮಾತನಾಡಿದ ಅವರು ನಮ್ಮ ತಾಲ್ಲೂಕಿನಲ್ಲಿ ಬಹುತೇಕ ರೈತರು ತಮ್ಮ ಕೃಷಿ ಚಟುವಟಿಕೆಗಳ ನಡುವೆ ಕುರಿಸಾಕಣೆಯನ್ನು ಮಾಡುತ್ತಿದ್ದು ಇವರಿಗೆ ಸರಿಯಾದ ಮಾರುಕಟ್ಟೆ ಇಲ್ಲದೆ ಇರುವುದು ತೊಂದರೆಯಾಗುತ್ತಿರುವುದನ್ನು ಮನಗಂಡು ತಮ್ಮ ಕುರಿ ಮೇಕೆಗಳನ್ನು ಉತ್ತಮ ಬೆಲೆಗೆ ಮಾರಾಟ ಮಾಡಲು ಅನುಕೂಲವಾಗುವಂತೆ ಒಂದು ಸುಸಜ್ಜಿತ ಮಾರುಕಟ್ಟೆಯನ್ನು ನಿರ್ಮಿಸಲಾಗುವುದು ಎಂದ ಅವರು ಗಣಿಬಾದಿತ ಪ್ರದೇಶಾಭಿವೃದ್ಧಿ ಯೋಜನೆಯಡಿ 1 ಕೋಟಿ 66 ಲಕ್ಷದ 54ಸಾವಿರ ವೆಚ್ಚದಲ್ಲಿ ಸು.2 ಎಕರೆ ವಿಸ್ತೀರ್ಣದಲ್ಲಿ ಅಧುನಿಕ ತಂತ್ರಜ್ಞಾನದ ತೂಕದ ಯಂತ್ರಗಳು, ಅಗತ್ಯವಿರುವಂತಹ ಮೂಲಭೂತ ಸೌಲಭ್ಯಗಳೊಂದಿಗೆ ಮಾರುಕಟ್ಟೆಯನ್ನು ನಿರ್ಮಿಸಲಾಗುವುದು ಈ ಮಾರುಕಟ್ಟೆಗೆ ಸೂಕ್ತವಾದ ಜಾಗವನ್ನು ಈ ಕೃಷಿ ಮಾರುಕಟ್ಟೆಯ ಆವರಣದಲ್ಲಿ ಗುರುತಿಸಲು ಬೇಟಿ ನೀಡಿದ್ದು ಈ ಬಗ್ಗೆ ಅಗತ್ಯಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಈ ಮಾರುಕಟ್ಟೆಯಿಂದಾಗಿ ನ್ಯಾಯಯುತ ಬೆಲೆ ಮತ್ತು ಪಾರದರ್ಶಕ ಬೆಲೆ ನಿಗದಿಗೆ ಅನುಕೂಲ, ಸಾಕಾಣಿಕೆದಾರರಿಗೆ ಸುದಾರಿತ ಅದಾಯ, ವೈಜ್ಞಾನಿಕವಾಗಿ ಕುರಿ ಮೇಕೆ ಸಾಕಾಣಿಕೆಗೆ ಪ್ರೋತ್ಸಾಹ, ಮದ್ಯವರ್ತಿಗಳ ಶೋಷಣೆಯಿಲ್ಲದೇ ವ್ಯಾಪಾರ, ವ್ಯಾಪಾರದ ಬಗ್ಗೆ ಎಲ್ಲಾ ಡಿಜಿಟಲ್ ನಿಯಂತ್ರಣ, ಸಾಲ, ವಿಮೆ, ಮತ್ತು ಜಾನುವಾರು ಹಣಕಾಸು ಸೌಲಭ್ಯ, ವೈಜ್ಞಾನಿಕ ಮಾರುಕಟ್ಟೆ ಸಮಯ ಮತ್ತು ಕೊಯ್ಲು ಯುಗದ ಪ್ರೋತ್ಸಾಹ, ರೋಗ ನಿಯಂತ್ರಣ, ಬೆಲೆ ಅನ್ವೇಷಣೆ ಮತ್ತು ಬಲಪಡಿಸುವುದು ಸೇರಿದಂತೆ ಸಾಂಸ್ಥಿಕ ಸುಧಾರಣೆಗಳೊಂದಿಗೆ ಮಾರುಕಟ್ಟೆಯನ್ನು ಬಲಪಡಿಸುವುದು ಈ ಮಾರುಕಟ್ಟೆಯ ಉದ್ದೇಶವಾಗಿದೆ ಎಂದರು.

ಪಶುಸಂಗೋಪನಾ ಇಲಾಖೆಯ ಕಾಂತರಾಜು ಮಾತನಾಡಿ ನಮ್ಮ ತಾಲ್ಲೂಕಿನಲ್ಲಿ ಹೆಚ್ಚು ಜನರು ಕುರಿ ಮೇಕೆಗಳನ್ನು ಸಾಕುವಂತಹ ಕುರಿಗಾಹಿಗಳಿದ್ದು ಅವುಗಳನ್ನು ಉತ್ತಮ ಬೆಲೆಗೆ ಮಾರಾಟ ಮಾಡಲು ಸಾದ್ಯವಾಗುತ್ತಿರಲಿಲ್ಲ ಇದರಲ್ಲಿ ಮದ್ಯವರ್ತಿಗಳ ಹಾವಳಿಯಿಂದಾಗಿ ರೈತರಿಗೆ ಸರಿಯಾದ ಬೆಲೆ ಸಿಗುತ್ತಿರಲಿಲ್ಲ ಈ ಕುರಿ ಮೇಕೆಯ ಮಾರುಕಟ್ಟೆ ಮಾಡುವುದರಿಂದ ರೈತರಿಗೆ ಉತ್ತಮ ಬೆಲೆ ಹಾಗೂ ತಮ್ಮ ಶ್ರಮಕ್ಕೆ ತಕ್ಕ ಪ್ರತಿಫಲದೊರೆಯುತ್ತದೆ ಎಂದ ಅವರು ಈ ಮಾರುಕಟ್ಟೆಯಿಂದಾಗಿ ನಮ್ಮ ರೈತರಿಗೆ ಕುರಿಗಾಹಿಗಳಿಗೆ ಅನುಕೂಲವಾಗಲಿದೆ ಎಂದರು.

ಈ ಸಂದರ್ಭದಲ್ಲಿ ಕೃಷಿಮಾರುಕಟ್ಟೆಯ ಕಾರ್ಯದರ್ಶಿ ಎಂ.ನಾಗೇಂದ್ರಕುಮಾರ್, ಲೋಕೋಪಯೋಗಿ ಇಲಾಖೆಯ ಎಇ ವಿನೋದ್‌ಕುಮಾರ್, ಕುರಿಗಾಹಿಗಳಾದ ಕುರುಬರಹಳ್ಳಿ ಮಹಾಲಿಂಗಯ್ಯ, ನಾಗಭೂಷಣ್, ಬಸವರಾಜು ಸೇರಿದಂತೆ ಇತರರು ಇದ್ದರು.

# ಎಸ್‌ಎಸ್‌ಎಲ್‌ಸಿ ಪರೀಕ್ಷೆ ಸುಗಮ ನಿರ್ವಹಣೆಗೆ ಡಿ.ಸಿ. ಸೂಚನೆ




ತುಮಕೂರು: ಇದೇ 18 ರಿಂದ ಆರಂಭವಾಗುವ ಎಸ್.ಎಸ್.ಎಲ್.ಸಿ. ಪರೀಕ್ಷೆ–1ನ್ನು ಸುಗಮ ಹಾಗೂ ಸುಲಲಿತವಾಗಿ ನಡೆಸಲು ಅಗತ್ಯ ತಯಾರಿ ಮಾಡಿಕೊಳ್ಳುವಂತೆ ಜಿಲ್ಲೆಯ ಸಂಬಂಧಿಸಿದ ಎಲ್ಲಾ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅವರು ಗುರುವಾರ ಸೂಚಿಸಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿಂದು ತುಮಕೂರು ಜಿಲ್ಲೆಯ ಎರಡೂ ಶೈಕ್ಷಣಿಕ ಜಿಲ್ಲೆಗಳಾದ ತುಮಕೂರು ದಕ್ಷಿಣ ಹಾಗೂ ಮಧುಗಿರಿ ಶೈಕ್ಷಣಿಕ ಜಿಲ್ಲೆಗಳ ಎಲ್ಲಾ ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆ ನಡೆಸಿದ ಅವರು, ಎಸ್.ಎಸ್.ಎಲ್.ಸಿ. ಪರೀಕ್ಷೆ ಮಕ್ಕಳ ಬದುಕಿನ ಮಹತ್ತರ ಘಟ್ಟದ ಪರೀಕ್ಷೆಯಾಗಿದೆ. ಪ್ರಶ್ನೆ ಪತ್ರಿಕೆ ಸೇರಿದಂತೆ ಪರೀಕ್ಷೆಯನ್ನು ಸುಗಮ ಹಾಗೂ ಸುಲಲಿತವಾಗಿ ನಡೆಸಲು ಅಗತ್ಯವಿರುವ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದರು.

ಪರೀಕ್ಷಾ ಮುಖ್ಯಸ್ಥರು ಹೆಚ್ಚಿನ ಜವಾಬ್ದಾರಿ ಹೊಂದಿರುತ್ತಾರೆ ಎಂದ ಅವರು, ಸರಿಯಾದ ಸಮಯಕ್ಕೆ ಸರಿಯಾದ ನಿರ್ಧಾರ ಕೈಗೊಳ್ಳಬೇಕು. ಪರೀಕ್ಷಾರ್ಥಿಗಳ ಹಿತದೃಷ್ಟಿಯಿಂದ ಸಂಬಂಧಿಸಿದ ಪರೀಕ್ಷಾ ಕೇಂದ್ರದಲ್ಲಿ ಅಗತ್ಯವಿರುವ ಎಲ್ಲಾ ಮೂಲ ಸೌಕರ್ಯಗಳನ್ನು ಪರಿಶೀಲಿಸಿ ಸರಿಪಡಿಸಿಕೊಳ್ಳಲು ಸೂಕ್ತ ತೀರ್ಮಾನಗಳನ್ನು ಸೂಕ್ತ ಸಮಯದಲ್ಲಿ ತೆಗೆದುಕೊಳ್ಳಬೇಕು ಎಂದರು.

ವಿದ್ಯುತ್ ನಿರಂತರ ಸಂಪರ್ಕ ಹೊಂದಿರಬೇಕು. ಸಂಬಂಧಿಸಿದ ತಹಶೀಲ್ದಾರರು ಹಾಗೂ ಆಯಾ ತಾಲ್ಲೂಕುಗಳ ಖಜಾನಾಧಿಕಾರಿಗಳು ಸರಿಯಾದ ಸಮಯಕ್ಕೆ ಪ್ರಶ್ನೆ ಪತ್ರಿಕೆಗಳನ್ನು ಮಾರ್ಗಾಧಿಕಾರಿಗಳ ಮೂಲಕ ಪರೀಕ್ಷಾ ಕೇಂದ್ರಕ್ಕೆ ಕಳುಹಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ಪ್ರಶ್ನೆ ಪತ್ರಿಕೆಗಳನ್ನು ಕೊಂಡೊಯ್ಯುವ ವಾಹನಗಳಿಗೆ ಸೂಕ್ತ ಜಿಪಿಎಸ್ ವ್ಯವಸ್ಥೆ ಅಳವಡಿಸಬೇಕು ಇತ್ಯಾದಿ ಜಾಗೃತ ಕ್ರಮಗಳನ್ನು ಸಂಬಂಧಿಸಿದ ಅಧಿಕಾರಿಗಳು ನಿರ್ವಹಿಸಬೇಕು ಎಂದರು.

ಪರೀಕ್ಷೆ ಮುಗಿಯುವವರೆಗೆ ನಿಯೋಜಿತ ಯಾವುದೇ ಅಧಿಕಾರಿಗಳಿಗೆ ರಜೆ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದ ಅವರು, ವಹಿಸಿದ ಕರ್ತವ್ಯವನ್ನು ಪ್ರಾಮಾಣಿಕವಾಗಿ ವ್ಯವಸ್ಥಿತವಾಗಿ ನಿರ್ವಹಿಸಬೇಕು ಎಂದರು.

ಅಲ್ಲದೆ, ತಹಶೀಲ್ದಾರರು ಪರೀಕ್ಷಾ ಕೇಂದ್ರದ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಇರುವ ವ್ಯಾಪ್ತಿಯಲ್ಲಿ ಜೆರಾಕ್ಸ್ ಅಥವಾ ಮುದ್ರಣ ಯಂತ್ರಗಳನ್ನು ಹೊಂದಿರುವ ಅಂಗಡಿಗಳನ್ನು ಮುಚ್ಚಿಸಲು ಕ್ರಮವಹಿಸಬೇಕು ಎಂದು ಸೂಚಿಸಿದರು.

ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಒಟ್ಟು 37130 ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ಪರೀಕ್ಷೆ ಬರೆಯುತ್ತಿದ್ದು, ತುಮಕೂರು ದಕ್ಷಿಣ ಜಿಲ್ಲೆಯಲ್ಲಿ ಒಟ್ಟು 23,693 ವಿದ್ಯಾರ್ಥಿಗಳು ಹಾಗೂ ಮಧುಗಿರಿ ಶೈಕ್ಷಣಿಕ ಜಿಲ್ಲೆಯಲ್ಲಿ 13,437 ವಿದ್ಯಾರ್ಥಿಗಳು ಪರೀಕ್ಷೆ–1ರಲ್ಲಿ ನೋಂದಾಯಿಸಿಕೊಂಡಿರುತ್ತಾರೆ. ಒಟ್ಟಾರೆ 131 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯುತ್ತಿದ್ದು, ಮುಕ್ತ ಹಾಗೂ ಸುಲಲಿತ ಪರೀಕ್ಷೆ ಬರೆಯಲು ವಿದ್ಯಾರ್ಥಿಗಳಿಗೆ ಪೂರಕ ವಾತಾವರಣವನ್ನು ನಿರ್ಮಿಸಬೇಕು ಎಂದು ಅವರು ತಿಳಿಸಿದರು.

ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ತಕ್ಷಣ ಪತ್ರಿಕಾಗೋಷ್ಠಿ ಕರೆದು ಎಸ್.ಎಸ್.ಎಲ್.ಸಿ. ಪರೀಕ್ಷೆ ಕುರಿತು ಪೂರ್ಣ ವಿವರಗಳನ್ನು ಸಾರ್ವಜನಿಕರಿಗೆ ತಿಳಿಯುವಂತೆ ಕ್ರಮವಹಿಸಲು ಜಿಲ್ಲಾಧಿಕಾರಿ ಸೂಚಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ: ಎನ್. ತಿಪ್ಪೇಸ್ವಾಮಿ, ತುಮಕೂರು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಕೆ.ಜಿ. ರಘುಚಂದ್ರ ಹಾಗೂ ಮಧುಗಿರಿ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಮಾಧವರೆಡ್ಡಿ, ಜಿಲ್ಲಾ ಖಜಾನಾಧಿಕಾರಿ ಉಮಾ ಆರ್.ವಿ., ಹೆಚ್ಚುವರಿ ಪೊಲೀಸ್ ಅಧೀಕ್ಷಕ ಸಿ.ಗೋಪಾಲ್ ಸೇರಿದಂತೆ ಎಲ್ಲಾ ಶಿಕ್ಷಣಾಧಿಕಾರಿಗಳು ಉಪಸ್ಥಿತರಿದ್ದರು. ಆಯಾ ತಾಲ್ಲೂಕುಗಳ ತಹಶೀಲ್ದಾರ್ ಹಾಗೂ ಇನ್ನಿತರೆ ಅಧಿಕಾರಿಗಳು ವಿಡಿಯೋ ಕಾನ್ಫರೆನ್ಸ್ ಮೂಲಕ ಸಭೆಗೆ ಹಾಜರಿದ್ದರು.

## ವೃದ್ಧ ದಂಪತಿಗೆ ಬಿಪಿಎಲ್ ಕಾರ್ಡು

ಆದ್ಯತೇತರ ಪಡಿತರ ಚೀಟಿಯೆಂದು ಪರಿಗಣಿಸಲಾಗಿತ್ತು. ಈ ವಿಷಯದ ಬಗ್ಗೆ ಅರ್ಜಿದಾರರು ಗುಬ್ಬಿ ತಾಲ್ಲೂಕು ತಹಶೀಲ್ದಾರ್ ಅವರಿಗೆ ಅರ್ಜಿ ಸಲ್ಲಿಸಿ ವಾಸ್ತವ ಅಂಶವನ್ನು ವಿವರಿಸಿದ್ದರು. ಗುರುವಾರ ಜಿಲ್ಲಾಧಿಕಾರಿ ಕಚೇರಿಗೆ ಪಡಿತರ ಚೀಟಿದಾರರಾದ ಚೆನ್ನಬಸಮ್ಮ ಮತ್ತು ಅವರ ಪತಿ ರಾಜಣ್ಣ ಅವರನ್ನು ಆಹ್ವಾನಿಸಿ ಪರಿಷ್ಕೃತ ಬಿಪಿಎಲ್ ಕಾರ್ಡು ಜೊತೆಗೆ ಅಕ್ಕಿಯನ್ನೂ ವಿತರಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಚೆನ್ನಬಸಮ್ಮ ಅವರು ಕಳೆದ 5 ತಿಂಗಳಿಂದ ಪಡಿತರ ಅಕ್ಕಿ ಇಲ್ಲದೆ ಸಮಸ್ಯೆ ಅನುಭವಿಸಬೇಕಾಯಿತು. ಕೊನೆಗೆ ಅಧಿಕಾರಿಗಳ ಮಧ್ಯ ಪ್ರವೇಶದಿಂದ ಅನುಕೂಲವಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಜಂಟಿ ನಿರ್ದೇಶಕಿ ಸೌಮ್ಯ ಉಪಸ್ಥಿತರಿದ್ದರು.

# ಧಾರ್ಮಿಕ ಉತ್ಸವಗಳು ಸೌಹಾರ್ದತೆ ಬೆಳೆಸುತ್ತವೆ ಡಾ.ಸಿ.ಎಂ.ರಾಜೇಶ್ ಗೌಡ

## ತಡಕಲೂರಿನಲ್ಲಿ ಶ್ರೀ ಕದ್ರಿ ನರಸಿಂಹಸ್ವಾಮಿ ಬ್ರಹ್ಮರಥೋತ್ಸವ



ಶಿರಾ :ಧಾರ್ಮಿಕ ಉತ್ಸವಗಳು ಸಮಾಜದಲ್ಲಿ ಏಕತೆ ಮತ್ತು ಸೌಹಾರ್ದತೆಯನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ ಎಂದು ಮಾಜಿ ಶಾಸಕರಾದ ಡಾ. ಸಿ.ಎಂ. ರಾಜೇಶ್ ಗೌಡ ಹೇಳಿದರು.

ಅವರು ಶಿರಾ ತಾಲೂಕಿನ ತಡಕಲೂರು ಗ್ರಾಮದಲ್ಲಿ ನಡೆದ ಶ್ರೀ ಕದ್ರಿ ನರಸಿಂಹಸ್ವಾಮಿ ಬ್ರಹ್ಮರಥೋತ್ಸವ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ತಡಕಲೂರು ಗ್ರಾಮದಲ್ಲಿರುವ ಈ ಪವಿತ್ರ ಕ್ಷೇತ್ರವು ಹಲವು ವರ್ಷಗಳಿಂದ ಭಕ್ತರ ಕೇಂದ್ರವಾಗಿದ್ದು, ಇತ್ತೀಚಿನ ವರ್ಷಗಳಲ್ಲಿ ಸ್ಥಳೀಯ ಭಕ್ತರು ಮತ್ತು ಗ್ರಾಮಸ್ಥರ ಸಹಕಾರದಿಂದ ಇದು ಕ್ರಮೇಣ ಪ್ರಮುಖ ಆಧ್ಯಾತ್ಮಿಕ ಕೇಂದ್ರವಾಗಿ ರೂಪುಗೊಂಡಿದೆ. ಬ್ರಹ್ಮರಥೋತ್ಸವದಂತಹ ಉತ್ಸವಗಳು ಗ್ರಾಮೀಣ ಪ್ರದೇಶಗಳಲ್ಲಿ ಧಾರ್ಮಿಕ ಚೇತನೆಯನ್ನು ಬಲಪಡಿಸುವುದರ ಜೊತೆಗೆ ಭಕ್ತಿ, ಸಂಸ್ಕೃತಿ ಹಾಗೂ ಸಾಂಪ್ರದಾಯಿಕ ಮೌಲ್ಯಗಳನ್ನು ಉಳಿಸಿ ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಗ್ರಾಮಸ್ಥರು ಡಾ. ಸಿ.ಎಂ.ರಾಜೇಶ್ ಗೌಡ ಅವರು ಶಾಸಕರಾಗಿದ್ದ ಅವಧಿಯಲ್ಲಿ ಈ ಪ್ರದೇಶದ ಅಭಿವೃದ್ಧಿಗೆ ನೀಡಿದ ಕೊಡುಗೆಗಳನ್ನು ಸ್ಮರಿಸಿ ಶಿರಾ–ಅಮರಾಪುರ ರಸ್ತೆಯನ್ನು ಡಾಂಬರೀಕರಣ ಮಾಡುವುದು ಹಾಗೂ ಅದರ ಅಗಲವನ್ನು 3.5 ಮೀಟರ್‌ನಿಂದ 7 ಮೀಟರ್‌ಗೆ ವಿಸ್ತರಣೆ ಮಾಡಿದ ಕಾರ್ಯದಿಂದ ಗ್ರಾಮಸ್ಥರಿಗೆ ಮತ್ತು ಭಕ್ತರಿಗೆ ಸಂಚಾರ ಸುಗಮವಾಗಿದೆ. ಇದೇ ರೀತಿ, ತಡಕಲೂರು ಗ್ರಾಮದಲ್ಲಿ ಸಿ.ಸಿ. ರಸ್ತೆ ನಿರ್ಮಾಣಕ್ಕೆ ನೆರವು ನೀಡಿರುವುದು ಹಾಗೂ ದೇವಾಲಯದ ಅಭಿವೃದ್ಧಿಗೆ ಶಾಸಕರ ನಿಧಿಯಿಂದ ಅನುದಾನ ನೀಡಿರುವುದನ್ನು ಸ್ಥಳೀಯರು ಸ್ಮರಿಸಿ ಕೃತಜ್ಞತೆ ವ್ಯಕ್ತಪಡಿಸಿದರು. ಮಾಜಿ ಗ್ರಾ.ಪಂ. ಅಧ್ಯಕ್ಷ ಬಸವೇಗೌಡ, ಪೂಜಾರ್ ತಿಪ್ಪೇಸ್ವಾಮಿ, ಮಹೇಶ್, ಶಿವರಾಜ್, ನರಸಿಂಹಗೌಡ, ಜಗನಾತಪ್ಪ ಸೇರಿದಂತೆ ಹಲವರು ಹಾಜರಿದ್ದರು.

# ಡಿಸಿಸಿ ಬ್ಯಾಂಕ್ ರೈತರಿಗೆ 0% ಬಡ್ಡಿ ಸಾಲ ನೀಡುತ್ತದೆ



ಮುಂದಿನ ದಿನಗಳಲ್ಲಿ ಸಾಲ ತಲುಪದ ರೈತರಿಗೆ ಸಾಲ ವಿತರಿಸಲಾಗುವುದು ಎಂದರು.

ಕಸಬಾ ಸೊಸೈಟಿ ನಿರ್ದೇಶಕಿ ರೇಣುಕ ಗುರುಮೂರ್ತಿ ಮಾತನಾಡಿ, 3 ವರ್ಷಗಳಿಂದ ರೈತರಿಗೆ ಸಾಲ ದೊರೆತಿರಲಿಲ್ಲ. ರೈತರು ಎಲ್ಲಿ ಹೋದರೂ ಬ್ಯಾಂಕಿನಿಂದ ಸಾಲ ಕೊಡಿಸುವ ಬಗ್ಗೆ ಮಾತನಾಡುತ್ತಿದ್ದರು. ಈಗ ಸಾಲ ಕೊಡುವ ಸಮಯ ಬಂದಿದೆ. ಇನ್ನೂ ನಾವಂದುಕೊಂಡಂತೆ ಹಲವಾರು ರೈತರಿಗೆ ಸಾಲ ದೊರೆತಿಲ್ಲ. ಈ ಬಗ್ಗೆ ಡಿಸಿಸಿ ಬ್ಯಾಂಕ್ ನಿರ್ದೇಶಕರು ಗಮನ ಹರಿಸಬೇಕು ಎಂದರು.

ಕಸಬಾ ಸೊಸೈಟಿ ನಿರ್ದೇಶಕ ಶಶಿಧರ್ ಮಾತನಾಡಿ, ರೈತರಿಂದ, ರೈತರಿಗಾಗಿ ರೈತರಿಗೋಸ್ಕರ ನೀಡುತ್ತಿರುವ ಸಾಲ ಇದಾಗಿದೆ. ಬಡ್ಡಿ ಇಲ್ಲದಂತೆ ರೈತರಿಗೆ ಸಾಲ ವಿತರಿಸಲಾಗಿದೆ. ತಾಲ್ಲೂಕಿನಲ್ಲಿ ಕೋಟಿಗಟ್ಟಲೆ ಸಾಲ ವಿತರಿಸಲು ರಾಜ್ ಕುಮಾರ್ ರವರ ಸಹಕಾರ ಹೆಚ್ಚು ಇದೆ ಎಂದರು.

ಕಸಬಾ ಸೊಸೈಟಿ ನಿರ್ದೇಶಕ ಶಶಿಧರ್ ಮಾತನಾಡಿ, ರೈತರಿಂದ, ರೈತರಿಗಾಗಿ ರೈತರಿಗೋಸ್ಕರ ನೀಡುತ್ತಿರುವ ಸಾಲ ಇದಾಗಿದೆ. ಬಡ್ಡಿ ಇಲ್ಲದಂತೆ ರೈತರಿಗೆ ಸಾಲ ವಿತರಿಸಲಾಗಿದೆ. ತಾಲ್ಲೂಕಿನಲ್ಲಿ ಸೊಸೈಟಿಗಳಲ್ಲಿ ಈಗಾಗಲ ಕೋಟಿಗಟ್ಟಲೆ ಸಾಲ ವಿತರಿಸಲು ರಾಜ್ ಕುಮಾರ್ ರವರ ಸಹಕಾರ ಹೆಚ್ಚು ಇದೆ ಎಂದರು.

ಸೊಸೈಟಿ ನಿರ್ದೇಶಕ ರಾಜಶೇಖರ್ ಮಾತನಾಡಿ, ಕಸಬಾ ಸೊಸೈಟಿಯಲ್ಲಿ ರಾಜ್ ಕುಮಾರ್ ರವರ ಸಹಕಾರದಿಂದ ತಾಲ್ಲೂಕಿನಲ್ಲಿ 5 ಕೋಟಿಗೂ ಹೆಚ್ಚು ಸಾಲ ವಿತರಿಸಲಾಗಿದೆ. ತಾಲ್ಲೂಕಿನ ಎಲ್ಲಾ ರೈತರಿಗೆ ಸಾಲ ವಿತರಿಸಲಾಗಿದೆ ಎಂದರು.ಕಾರ್ಯಕ್ರಮದಲ್ಲಿ ಕಸಬಾ ಸೊಸೈಟಿ ನಿರ್ದೇಶಕರುಗಳಾದ ಕೆ.ಪಿ, ಸಿ.ಎಂ. ರಂಗಸ್ವಾಮಯ್ಯ ಹಾಗೂ ಡಿಸಿಸಿ ಬ್ಯಾಂಕ್ ಮೇಲ್ವಿಚಾರಕ ರಂಗಸ್ವಾಮಯ್ಯ, ರಘು ಮತ್ತಿತರರು ಇದ್ದರು.

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA . SUB EDITOR- A.S.BANUPRAKASH CONTACT : 9901010109 GMAIL: suryapragathi2021@gmail.com.